ಸಂಪುಟ: 2 ।ಸಂಚಿಕೆ: 8 ।ದಿನಾಂಕ: 16 ಅಕ್ಟೋಬರ್ 2019 ।ತುಮಕೂರು ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಪತ್ರಿಕೋದ್ಯಮ ವಿದ್ಯಾರ್ಥಿಗಳ ಪ್ರಾಯೋಗಿಕ ಸಂಚಿಕೆ । ಖಾಸಗಿ ಪ್ರಸಾರಕ್ಕಾಗಿ ಮಾತ್ರ

# ಕಲ್ಪತರು ಟೈಮ್ಸ್

ಸದ್ದಿಲ್ಲದೆ ಮನ ಸೆಳೆದ 'ಸೈರಾ' ಪು-3

ಪುಸ್ತಕದ ಅವಹೇಳನವೇ ಜ್ಞಾನದ ಕೊಲೆ.
–ಜೆ. ಜೆ. ರೂಸೋ

ಮರಳಿ ಮಣ್ಣಿಗೆ ಪು-4

# 'ಅಂತರಜಾಲದಲ್ಲಿ ಕನ್ನಡದ ಜ್ಞಾನ ವಿಸ್ತಾರವಾಗಲಿ'

## ಕನ್ನಡ ವಿಕಿಪೀಡಿಯಾ ಸಂಪಾದನೋತ್ಸವವನ್ನು ಉದ್ಘಾಟಿಸಿ ಪ್ರೊ. ವೈ. ಎಸ್. ಸಿದ್ದೇಗೌಡ

**ತುಮಕೂರು:** ಅಂತರಜಾಲದಲ್ಲಿ ಎಲ್ಲ ಕ್ಷೇತ್ರಗಳ ಕುರಿತಾದ ತಾಂತ್ರಿಕ ಜ್ಞಾನ ಹೆಚ್ಚುಹೆಚ್ಚು ಲಭ್ಯವಾಗುವಂತೆ ಮಾಡುವ ಅವಶ್ಯಕತೆಯಿದೆ ಎಂದು ತುಮಕೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ವೈ. ಎಸ್. ಸಿದ್ದೇಗೌಡ ತಿಳಿಸಿದರು.

ತುಮಕೂರು ವಿವಿ ಸ್ನಾತಕೋತ್ತರ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗವು ಕರಾವಳಿ ವಿಕಿಮೀಡಿಯನ್ಸ್ ಹಾಗೂ ವಿಕಿವಿಮೆನ್ಸ್ ಮಂಗಳೂರು ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಎರಡು ದಿನಗಳ 'ಕನ್ನಡ ವಿಕಿಪೀಡಿಯಾ ಸಂಪಾದನೋತ್ಸವ'ವನ್ನು ಶನಿವಾರ ಉದ್ಘಾಟಿಸಿ ಮಾತನಾಡಿದರು.

ಆಧುನಿಕ ಸಮಾಜಕ್ಕೆ ನಾವು ಹೊಂದಿಕೊಳ್ಳಬೇಕಾದರೆ ಬದಲಾವಣೆಗೆ ಸಿದ್ಧರಾಗಬೇಕು. ವೈವಿಧ್ಯಮಯ ಮಾಹಿತಿಗಳು ಕನ್ನಡದಲ್ಲಿ ಅಂತರಜಾಲದಲ್ಲಿ ದೊರೆಯುವಂತೆ ಆಗಬೇಕು. ಉತ್ಸಾಹೀ ಯುವಕರು ಇಂತಹ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು ಎಂದರು.

ವಿಕಿಪೀಡಿಯದಿಂದ ಶಿಕ್ಷಣ ಕ್ಷೇತ್ರಕ್ಕೆ ಅಪಾರ ಅನುಕೂಲವಿದೆ. ವಿಕಿಪೀಡಿಯ ಕಾರ್ಯಾಗಾರಗಳನ್ನು ಎಲ್ಲ ವಿಶ್ವವಿದ್ಯಾನಿಲಯಗಳು ಮತ್ತು ಕಾಲೇಜುಗಳಲ್ಲಿ ನಡೆಸುವುದು ತುಂಬ ಅವಶ್ಯಕ ಎಂದರು.

ಕನ್ನಡದ ಮೊದಲ ಅಂತರಜಾಲ ಪತ್ರಿಕೆಯ ಸಂಪಾದಕ ಡಾ.ಯು.ಬಿ. ಪವನಜ ಮಾತನಾಡಿ, ಪ್ರತಿ ತಿಂಗಳು ಸುಮಾರು 23 ಲಕ್ಷ ಮಂದಿ ಕನ್ನಡ ವಿಕಿಪೀಡಿಯಾ ವೀಕ್ಷಿಸುತ್ತಾರೆ. ಆದರೆ ಕನ್ನಡ ವಿಕಿಪೀಡಿಯದಲ್ಲಿ ಕೇವಲ 24 ಸಾವಿರ ಲೇಖನಗಳಿವೆ. ಈ ಸಂಖ್ಯೆಯನ್ನು ಹೆಚ್ಚಿಸಿದಷ್ಟೂ ಅಂತರಜಾಲದಲ್ಲಿ ಕನ್ನಡ ಗಟ್ಟಿಯಾಗುತ್ತಾ ಹೋಗುತ್ತದೆ ಎಂದರು.

ಕನ್ನಡ ವಿಕಿಪೀಡಿಯ ಜನರಿಂದ ಜನರಿಗಾಗಿ ಇರುವ ಒಂದು ಸ್ವತಂತ್ರ ವಿಶ್ವಕೋಶ. ಕಾಲದಿಂದ ಕಾಲಕ್ಕೆ ಜ್ಞಾನಜಗತ್ತಿನಲ್ಲಿ ಆಗುವ ಬದಲಾವಣೆಗಳ ಆಧಾರದಲ್ಲಿ ತಕ್ಷಣ ಪರಿಷ್ಕರಿಸಬಹುದು. ಇದಕ್ಕೆ 1139 ಸಂಪಾದಕರಿದ್ದರೂ ಸಕ್ರಿಯರಾಗಿರುವುದು 34 ಮಂದಿ ಮಾತ್ರ. ಕನ್ನಡದಲ್ಲಿ ಅವಶ್ಯಕತೆಯಿರುವ ಮಾಹಿತಿಗೆ ಹೋಲಿಸಿದರೆ ಇದು ತೀರಾ ಕಡಿಮೆ ಎಂದರು.




**ತುಮಕೂರು ವಿವಿ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗವು ಕರಾವಳಿ ವಿಕಿಮೀಡಿಯನ್ಸ್ ಹಾಗೂ ವಿಕಿವಿಮೆನ್ಸ್ ಮಂಗಳೂರು ಸಹಯೋಗದಲ್ಲಿ ಹಮ್ಮಿಕೊಂಡಿದ್ದ 'ಕನ್ನಡ ವಿಕಿಪೀಡಿಯಾ ಸಂಪಾದನೋತ್ಸವ'ವದಲ್ಲಿ ಕುಲಪತಿ ಪ್ರೊ. ವೈ. ಎಸ್. ಸಿದ್ದೇಗೌಡ ಮಾತನಾಡಿದರು.**

ವಿಕಿಪೀಡಿಯ ಸಂಪಾದಿಸುವುದರಿಂದ ಬರವಣಿಗೆ ಶೈಲಿ, ಸಂಶೋಧನ ಕೌಶಲ, ಭಾಷಾ ಪ್ರಭುತ್ವ ಬೆಳೆಯುತ್ತದೆ. ವಿದ್ಯಾರ್ಥಿಗಳು ಜ್ಞಾನದ ಗ್ರಾಹಕರಾಗುವುದಷ್ಟೇ ಅಲ್ಲದೆ ಜ್ಞಾನದ ಉತ್ಪಾದಕರೂ ಆಗಬೇಕು ಎಂದರು.

ಕುಲಸಚಿವ ಪ್ರೊ. ಕೆ. ಎನ್. ಗಂಗಾನಾಯಕ್ ಮಾತನಾಡಿ ತಂತ್ರಜ್ಞಾನ ಯುಗದಲ್ಲಿ ಸಂಭವಿಸುತ್ತಿರುವ ಬದಲಾವಣೆಗಳಿಗೆ ಒಗ್ಗಿಕೊಳ್ಳಲು ಹಾಗೂ ಜ್ಞಾನ ಸೃಷ್ಟಿ ಮಾಡಲು ಯುವಕರು ಆದ್ಯತೆ ನೀಡಬೇಕು ಎಂದರು.

ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ಸಂಯೋಜಕ ಸಿಬಂತಿ ಪದ್ಮನಾಭ ಕೆ. ವಿ., ಪ್ರಸ್ತುತ ಸಂಪಾದನೋತ್ಸವದಲ್ಲಿ ಅಳಿವಿನಂಚಿನಲ್ಲಿರುವ ಅನೇಕ ಭಾರತೀಯ ಭಾಷೆಗಳ ಕುರಿತ ಮಾಹಿತಿಯನ್ನು ಕನ್ನಡ ವಿಕಿಪೀಡಿಯಾಕ್ಕೆ ಸೇರಿಸಲಾಗುತ್ತಿದೆ ಎಂದರು.

ವಿವಿ ಕಲಾ ಕಾಲೇಜಿನ ಪ್ರಾಂಶುಪಾಲ ಪ್ರೊ. ಕೆ. ರಾಮಚಂದ್ರಪ್ಪ, ಸಂಪನ್ಮೂಲ ವ್ಯಕ್ತಿ ಕೆ. ಟಿ. ಧನಲಕ್ಷ್ಮೀ ಉಪಸ್ಥಿತರಿದ್ದರು.

ಬೋಸಮ್ಮ ಓ.

### ಭಾಷಾ ವೈವಿಧ್ಯತೆಯ ಸಂಪಾದನೋತ್ಸವ

'ಭಾರತದ ಭಾಷಾ ವೈವಿಧ್ಯತೆ' ಪ್ರಸ್ತುತ ಸಂಪಾದನೋತ್ಸವದ ಮುಖ್ಯ ವಿಷಯವಾಗಿತ್ತು. ಅಳಿವಿನಂಚಿನಲ್ಲಿರುವ ಸುಮಾರು 30 ಭಾರತೀಯ ಭಾಷೆಗಳ ಕುರಿತಾದ ಕನ್ನಡ ಲೇಖನಗಳನ್ನು ಕಾರ್ಯಾಗಾರದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ಸಿದ್ಧಪಡಿಸಿ ಕನ್ನಡ ವಿಕಿಪೀಡಿಯದಲ್ಲಿ ಪ್ರಕಟಿಸಿದರು.

ಸಂತಾಲಿ, ಸಿಂಧಿ, ಮಾಗಧಿ, ಕಂಗ್ರಿ, ಕುರುಖ್, ಕೊರ್ಕು, ಐಮೋಲ್, ಜರವ, ಮಾಲವಿ, ಬಘೇಲಿ ಮೊದಲಾದ ಭಾಷೆಗಳ ಕುರಿತ ಲೇಖನಗಳು ಕಾರ್ಯಾಗಾರದಲ್ಲಿ ಸಿದ್ಧಗೊಂಡು ವಿಕಿಪೀಡಿಯದಲ್ಲಿ ಪ್ರಕಟವಾದವು.

"ಈವರೆಗೆ ನಡದ ಅನೇಕ ಕಾರ್ಯಾಗಾರಗಳ ಪೈಕಿ ಇದೇ ಅತ್ಯಂತ ಯಶಸ್ವೀ ಕಾರ್ಯಾಗಾರ. ಕಾರ್ಯಾಗಾರದಲ್ಲಿ ಭಾಗವಹಿಸಿದ ಬಹುತೇಕ ಎಲ್ಲರ ಲೇಖನಗಳು ಇಷ್ಟು ಶೀಘ್ರವಾಗಿ ವಿಕಿಪೀಡಿಯಲ್ಲಿ ಪ್ರಕಟವಾಗಿರುವುದು ಇದೇ ಮೊದಲ ಬಾರಿ. ಇಂತಹ ಕಾರ್ಯಾಗಾರಗಳು ಹೆಚ್ಚಾದಷ್ಟೂ ಅಂತರಜಾಲದಲ್ಲಿ ಕನ್ನಡ ಹೆಚ್ಚು ಬಲಗೊಳ್ಳುತ್ತಾ ಹೋಗುತ್ತದೆ. ಅಲ್ಲದೆ ಭಾಗವಹಿಸುವವರಲ್ಲಿ ಬರವಣಿಗೆ ಹಾಗೂ ಸಂಶೋಧನ ಕೌಶಲ ಅಭಿವೃದ್ಧಿಯಾಗುತ್ತದೆ," ಎಂದು ಸಂಪನ್ಮೂಲ ವ್ಯಕ್ತಿ ಡಾ. ಯು. ಬಿ. ಪವನಜ ಅಭಿಪ್ರಾಯಪಟ್ಟರು.

ಕಾರ್ಯಾಗಾರದಲ್ಲಿ ಭಾಗವಹಿಸಿದ ಎಲ್ಲರಿಗೂ ಪ್ರಮಾಣಪತ್ರ ವಿತರಿಸಲಾಯಿತು.

# 'ಮಹಿಳೆಯರು ಸವಾಲುಗಳನ್ನು ಅವಕಾಶಗಳನ್ನಾಗಿ ಪರಿವರ್ತಿಸಬೇಕು'

**ತುಮಕೂರು:** ಮಹಿಳೆಯರು ತಮ್ಮೆದುರಿನ ಸವಾಲುಗಳನ್ನು ಅವಕಾಶಗಳನ್ನಾಗಿ ಪರಿವರ್ತಿಸಿಕೊಳ್ಳಬೇಕು ಎಂದು ತುಮಕೂರು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶುಭಾ ಕಲ್ಯಾಣ್ ತಿಳಿಸಿದರು.

ತುಮಕೂರು ವಿಶ್ವವಿದ್ಯಾನಿಲಯದ ಮಹಿಳಾ ಅಧ್ಯಯನ ಕೇಂದ್ರ, ಐಕ್ಯೂಎಸಿ ಹಾಗೂ ತುಮಕೂರು ಎಚ್‌ಆರ್ ಫೋರಂ ಶುಕ್ರವಾರ ಹಮ್ಮಿಕೊಂಡಿದ್ದ 'ಉದ್ಯೋಗಸ್ಥ ಮಹಿಳೆಯರ ತಲ್ಲಣಗಳು' ಕುರಿತ ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಮಹಿಳೆಯರಿಗೆ ನೈಸರ್ಗಿಕವಾಗಿಯೇ ಹಲವಾರು ಸವಾಲುಗಳಿವೆ. ಮಗುವನ್ನು ಹೆರುವುದೇ ಮೊದಲಾದ ಕರ್ತವ್ಯಗಳನ್ನು ಆಕೆಯೇ ನಿರ್ವಹಿಸಬೇಕು. ಇದರಿಂದ ಆಕೆಯ ಉದ್ಯೋಗ ಜೀವನಕ್ಕೆ ತೊಂದರೆಯಾಗಬಹುದು. ಇದನ್ನು ಆಕೆ ಒಂದು ಅವಕಾಶವಾಗಿ ಹೆಮ್ಮೆಯಿಂದ ಸ್ವೀಕರಿಸಬೇಕು ಎಂದರು.

ವಿದೇಶಗಳಲ್ಲಿರುವಂತೆ ನಮ್ಮಲ್ಲೂ ಮಹಿಳೆಯರಿಗೆ ಸಂಬಂಧಿಸಿದ ಸಾಕಷ್ಟು ಕಾನೂನುಗಳಿವೆ. ಅನುಷ್ಠಾನಗೊಂಡಷ್ಟು ಯಶಸ್ವಿಯಾಗಿ ನಮ್ಮ ದೇಶದಲ್ಲಿ ಜಾರಿಗೆ ಬಂದಿಲ್ಲ. ಐಟಿ ಕ್ಷೇತ್ರದಲ್ಲಿ ಸಾಕಷ್ಟು ಮಹಿಳೆಯರು ಇಂದು ದುಡಿಯುತ್ತಿದ್ದಾರೆ. ಆದರೆ ಅವರು ಪುರುಷರಿಗೆ ಸಮಾನವಾಗಿ ಅಲ್ಲಿ ದುಡಿಯುವುದು ತುಂಬ ಕಠಿಣ. ಇದು ಅರಿವಾದ ಮೇಲೆ ನಾನು ಐಟಿ ಕ್ಷೇತ್ರವನ್ನು ತೊರೆದು ಪರಿಶ್ರಮದಿಂದ ಐಎಎಸ್ ಪರೀಕ್ಷೆಯಲ್ಲಿ ತೇರ್ಗಡೆಯಾದೆ ಎಂದು ಸ್ಮರಿಸಿಕೊಂಡರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ತುಮಕೂರು ವಿವಿ ಕುಲಪತಿ ಪ್ರೊ. ವೈ. ಎಸ್. ಸಿದ್ದೇಗೌಡ ಮಾತನಾಡಿ, ಸರಿಯಾದ ಶಿಕ್ಷಣ ಹಾಗೂ ಉದ್ಯೋಗವನ್ನು ಪಡೆದರೆ ಮಹಿಳೆಯರು ಪುರುಷರಿಗಿಂತ ಎರಡು ಪಟ್ಟು ಕೊಡುಗೆಯನ್ನು ಸಮಾಜಕ್ಕೆ ನೀಡಬಲ್ಲರು ಎಂದರು.



**ತುಮಕೂರು ವಿವಿ ಮಹಿಳಾ ಅಧ್ಯಯನ ಕೇಂದ್ರ ಆಯೋಜಿಸಿದ್ದ ಸಂವಾದ ಕಾರ್ಯಕ್ರಮವನ್ನು ಜಿಲ್ಲಾ ಪಂಚಾಯತ್ ಸಿಇಒ ಶುಭಾ ಕಲ್ಯಾಣ್ ಉದ್ಘಾಟಿಸಿದರು. ಕುಲಪತಿ ಪ್ರೊ. ವೈ. ಎಸ್. ಸಿದ್ದೇಗೌಡ ಮತ್ತಿತರರು ಇದ್ದಾರೆ.**

ನ್ಯಾಯವಾದಿ ಹಾಗೂ ಲೇಖಕಿ ಅಂಜಲಿ ರಾಮಣ್ಣ ಮಾತನಾಡಿ, ಮಹಿಳೆಯರು ಸಮತೋಲನದ ಸಮಾಜ ಕಟ್ಟಬೇಕು. ಆಧುನಿಕತೆಯ ಕಾರಣದಿಂದ ಸಮಾಜದಲ್ಲಿ ಉಂಟಾಗುತ್ತಿರುವ ತಲ್ಲಣಗಳನ್ನು ಅರ್ಥಮಾಡಿಕೊಂಡು ಮುಂದುವರಿಯಬೇಕು ಎಂದರು. ಒಡನಾಡಿ ಸೇವಾ ಸಂಸ್ಥೆಯ ಕೆ. ವಿ. ಸ್ಟ್ಯಾನ್ಲಿ, ಎಂ. ಪರಶುರಾಮ, ಹೆಲ್ತಿಯಂ ಮೆಡ್‌ಟೆಕ್‌ನ ಜನರಲ್ ಮ್ಯಾನೇಜರ್ ಭಾನು ಶಿವಕುಮಾರ್, ಸಾಹಿತ್ಯ ಪರಿಷತ್ ಅಧ್ಯಕ್ಷೆ ಬಾ. ಹ. ರಮಾಕುಮಾರಿ, ಐಕ್ಯೂಎಸಿ ಸಂಯೋಜಕ ಡಾ. ಕೆ. ಜಿ. ಪರಶುರಾಮ, ಡಾ. ಜ್ಯೋತಿ, ಡಾ. ಗೀತಾ ವಸಂತ ಮತ್ತಿತರರು ಉಪಸ್ಥಿತರಿದ್ದರು.

ನಿಸರ್ಗ ಸಿ.ಎ.

# 'ಪರಿಸರದ ವಿಷಯದಲ್ಲಿ ಪ್ರಜ್ಞಾವಂತಿಕೆ ಅನಿವಾರ್ಯ: ಪ್ರೊ.ವೈ.ಎಸ್.ಸಿದ್ದೇಗೌಡ

**ತುಮಕೂರು:** ಪರಿಸರದ ವಿಷಯದಲ್ಲಿ ಎಲ್ಲರೂ ಗರಿಷ್ಠ ಪ್ರಜ್ಞಾವಂತರಾಗಬೇಕಿದೆ ಎಂದು ತುಮಕೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ವೈ. ಎಸ್. ಸಿದ್ದೇಗೌಡ ತಿಳಿಸಿದರು.

ತುಮಕೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪರಿಸರ ವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ವತಿಯಿಂದ ಶುಕ್ರವಾರ ಆಯೋಜಿಸಲಾಗಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.



**ತುಮಕೂರು ವಿವಿ ಪರಿಸರ ವಿಜ್ಞಾನ ವಿಭಾಗ ಏರ್ಪಡಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಕುಲಪತಿ ಪ್ರೊ. ವೈ. ಎಸ್. ಸಿದ್ದೇಗೌಡ ಉದ್ಘಾಟಿಸಿದರು.**

ಮಾನವನ ಹೆಚ್ಚಿದ ಅವಶ್ಯಕತೆಗಳನ್ನು ಪೂರೈಸಲು ಮಾನವ ಭೌತಿಕ ಪರಿಸರವನ್ನು ನಾಶ ಪಡಿಸುತ್ತಿದ್ದಾನೆ. ಪರಿಸರ ಉಳಿಸುವಲ್ಲಿ ಯುವ ಜನತೆಯ ಪಾತ್ರ ಹೆಚ್ಚಿರುತ್ತದೆ. ಎಲ್ಲರೂ ತಮ್ಮ ಪರಿಸರದ ಬಗೆಗಿನ ಜವಾಬ್ದಾರಿಯನ್ನು ನಿಭಾಯಿಸಬೇಕು ಎಂದರು.

ವಿಶೇಷ ಉಪನ್ಯಾಸ ನೀಡಿದ ಗುಲಬರ್ಗಾ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಈ. ಟಿ. ಪುಟ್ಟಯ್ಯ, ಫಿನ್ಲ್ಯಾಂಡ್ ಮಾದರಿಯ ನಿಯಮಗಳು ಮತ್ತು ನಿಯಂತ್ರಣವನ್ನು ನಮ್ಮ ದೇಶದಲ್ಲಿ ಅಳವಡಿಸಬೇಕೆಂದು ತಿಳಿಸಿದರು.

ಪರಿಸರದ ಅಂಗಗಳಾದ ಗಾಳಿ, ನೀರು, ಮಣ್ಣು ಇವುಗಳ ಪ್ರಮಾಣಿತ ಗುಣಮಟ್ಟದ ಬಗ್ಗೆ ವಿವರಿಸಿದರು. ಜನರಲ್ಲಿ ಪರಿಸದ ಬಗ್ಗೆ ಜಾಗೃತಿಯ ಜೊತೆಗೆ ಪರಿಸರ ಸಂರಕ್ಷಿಸುವ ಮನಸ್ಥಿತಿ ಇರಬೇಕು ಎಂದ ಅವರು ಶಬ್ದ ಮಾಲಿನ್ಯದಿಂದ ಉಂಟಾಗುವ ಸಮಸ್ಯೆಗಳು ಮತ್ತು ಅದರ ಪರಿಣಾಮಗಳ ಬಗ್ಗೆ ವಿವರಿಸಿದರು.

ಅಭಿವೃದ್ಧಿಯ ಹೆಸರಲ್ಲಿ ಪರಿಸರಕ್ಕೆ ಮಾನವರಿಂದ ಆಗುತ್ತಿರುವ ಅಪಾಯಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು ಅವಶ್ಯವಾಗಿದೆ ಎಂದು ವಿಭಾಗದ ಸಂಯೋಜಕ ಡಾ.ಹೆಚ್.ರಾಜಾನಾಯ್ಕ ತಿಳಿಸಿದರು. ಕುಲಸಚಿವ ಪ್ರೊ. ಎನ್. ಗಂಗಾನಾಯಕ್ ಉಪಸ್ಥಿತರಿದ್ದರು.

# ‘ಮತದಾರರ ನೋಂದಣಿ ಕಡ್ಡಾಯವಾಗಲಿ’

## ಮತದಾನ ಪ್ರತಿಜ್ಞಾವಿಧಿ

**ತುಮಕೂರು:** ಮತದಾರರ ಪಟ್ಟಿಯಲ್ಲಿ ಎಲ್ಲ ಮತದಾರರು ತಮ್ಮ ಹೆಸರು ನೋಂದಾಯಿಸಿಕೊಳ್ಳುವುದನ್ನು ಕಡ್ಡಾಯ ಮಾಡಬೇಕು ಎಂದು ಕಲಾ ಕಾಲೇಜಿನ ಪ್ರಾಂಶುಪಾಲ ಪ್ರೊ. ಕೆ. ರಾಮಚಂದ್ರಪ್ಪ ಅಭಿಪ್ರಾಯಪಟ್ಟರು.

ತುಮಕೂರು ವಿಶ್ವವಿದ್ಯಾನಿಲದ ಕಲಾ ಕಾಲೇಜಿನ ಆವರಣದಲ್ಲಿ ಅ.4ರಂದು ರಾಜ್ಯಶಾಸ್ತ್ರ ವಿಭಾಗದ ವತಿಯಿಂದ ಆಯೋಜಿಸಲಾಗಿದ್ದ “ಮತದಾರರ ಸಾಕ್ಷರತಾ ಅಭಿಯಾನ” ಕಾರ್ಯಕ್ರಮದಲ್ಲಿ ಮಾತನಾಡಿದರು. ವಿದ್ಯಾರ್ಥಿಗಳು ತಾವು ಮಾತ್ರವಲ್ಲದೆ 18 ವರ್ಷ ತುಂಬಿದ ಎಲ್ಲರೂ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿಕೊಳ್ಳುವಂತೆ ಅರಿವು ಮೂಡಿಸಬೇಕು ಎಂದರು.

ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಶ್ರೀಪಾದ್ ಕುಲಕರ್ಣಿ ಮಾತನಾಡಿ, ಚುನಾವಣೆಗಳನ್ನು ನಡೆಸಬೇಕಾಗಿರುವುದು ಚುನಾವಣಾ ಆಯೋಗವೇ ಹೊರತು ವ್ಯಕ್ತಿಗಳಲ್ಲ ಎಂದು ಹೇಳಿದರು. ಭಾರತದ ಸಂವಿಧಾನ 1949 ನವೆಂಬರ್ 26ರಂದು ರೂಪುಗೊಂಡಿತು. ಪ್ರಜಾಪ್ರತಿನಿಧಿ ಕಾಯ್ದೆಯ ಪ್ರಕಾರ 1950 ಜನವರಿ 26 ರಂದು ಭಾರತೀಯ ಚುನಾವಣಾ ಆಯೋಗ ಅಸ್ತಿತ್ವಕ್ಕೆ ಬಂತು ಎಂದರು.

1990ರಲ್ಲಿ ಟಿ.ಎನ್. ಶೇಷನ್ ಅವರು ತೋರಿದ ಕಾರ್ಯವೈಖರಿ ಚುನಾವಣೆಗೆ ಒಂದು ಮೆರಗು ತಂದಿತು. ಚುನಾವಣೆಯಲ್ಲಿ ಪಾರದರ್ಶಕತೆ ತರಬೇಕು ಮತ್ತು ಮತದಾರ ಗುರುತಿನ ಚೀಟಿಯನ್ನು ಜಾರಿಗೆ ತರಬೇಕು ಎಂದು ಮೊದಲು ಕೆಲಸ ಆರಂಭಿಸಿದವರು ಅವರೇ ಎಂದರು.

ಚುನಾವಣಾ ಆಯೋಗದ ಆದೇಶದಂತೆ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಮತದಾರರ ಸಾಕ್ಷರತಾ ಅಭಿಯಾನವನ್ನು ಏರ್ಪಡಿಸಬೇಕು. ಆಗ ಮಾತ್ರ ಎಲ್ಲರೂ ಮತದಾನದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗುತ್ತದೆ. ರಾಜಕೀಯ ಸಾಕ್ಷರತೆಯಿಂದ ಮಾತ್ರ ರಾಜಕೀಯದಲ್ಲಿ ಅಪರಾಧೀಕರಣ ಕಡಿಮೆಯಾಗುತ್ತದೆ ಎಂದರು. ಡಾ॥ ಮೌನೇಶ್ವರ ಶ್ರೀನಿವಾಸರಾವ್ ಎಲ್ಲಾ ವಿದ್ಯಾರ್ಥಿಗಳಿಗೆ ಮತದಾನದ ಪ್ರತಿಜ್ಞಾವಿಧಿ ಭೋದಿಸಿದರು.

ಕಾರ್ಯಕ್ರಮದಲ್ಲಿ ಉಪಪ್ರಾಂಶುಪಾಲ ಟಿ.ಎನ್. ಹರಿಪ್ರಸಾದ್, ರಾಜ್ಯಶಾಸ್ತ್ರ ವಿಭಾಗದ ಎಲ್ಲಾ ಉಪನ್ಯಾಸಕರು ಉಪಸ್ಥಿತರಿದ್ದರು.





ವಿವಿ ಕಲಾ ಕಲೇಜಿನನಲ್ಲಿ ಏರ್ಪಡಿಸಿದ್ದ ಮತದಾರರ ಸಾಕ್ಷರತಾ ಅಭಿಯಾನದಲ್ಲಿ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಮತದಾನದ ಪ್ರತಿಜ್ಞಾವಿಧಿ ಸ್ವೀಕರಿಸಿದರು.

ಸವಿತ ಜಿ.

## ವಿಜ್ಞಾನ ಪ್ರಸಾರಕ್ಕೊಂದು ವಿಶೇಷ ಕಾರ್ಯಕ್ರಮ

ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು ಭೌತಶಾಸ್ತ್ರ ಸ್ನಾತಕೋತ್ತರ ಮತ್ತು ಸಂಶೋಧನಾ ವಿಭಾಗದ ವತಿಯಿಂದ ವಿಜ್ಞಾನವನ್ನು ಜನಪ್ರಿಯಗೊಳಿಸುವ ಕಾರ್ಯಕ್ರಮವನ್ನು ಗುಬ್ಬಿ ತಾಲೂಕಿನ ಎಂ.ಎನ್. ಕೋಟೆಯ ಶ್ರೀ ಶಾರದಾ ಪ್ರೌಢಶಾಲೆ ಸೆ.20 ರಂದು ಹಮ್ಮಿಕೊಳ್ಳಲಾಗಿತ್ತು.

ಗ್ರಾಮೀಣ ಭಾಗದ ಪ್ರೌಢಶಾಲಾ ವಿದ್ಯಾರ್ಥಿಗಳಲ್ಲಿ ವಿಜ್ಞಾನದ ಮೂಲಭೂತ ತತ್ವಗಳನ್ನು ಕಲಿಯಲು ಪ್ರೇರೇಪಿಸುವುದು ಮತ್ತು ಯುವಪೀಳಿಗೆಯಲ್ಲಿ ವೈಜ್ಞಾನಿಕ ಮನೋಭಾವ ಹೆಚ್ಚಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿತ್ತು.

“ಗ್ರಾಮೀಣ ವಿದ್ಯಾರ್ಥಿಗಳಿಗೆ ವಿಜ್ಞಾನದಲ್ಲಿ ಇತ್ತೀಚಿನ ಬೆಳೆವಣಿಗೆಯನ್ನು ತಿಳಿಯಲು ಇದೊಂದು ಸುವರ್ಣವಕಾಶವಾಗಿತ್ತು” ಎಂದು ಕಾರ್ಯಕ್ರಮದ ಸಂಯೋಜಕ ಡಾ। ಚಿಕ್ಕಪ್ಪ ಉಡಗಣಿ ತಿಳಿಸಿದರು.

ಸುಮಾರು ನೂರು ಸ್ನಾತಕೋತ್ತರ ವಿದ್ಯಾರ್ಥಿಗಳು ಮತ್ತು ವಿಭಾಗದ ಎಲ್ಲ ಭೋದಕ ವರ್ಗದವರು ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿದರು.

ಈ ಕಾರ್ಯಕ್ರಮದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳು ವಿಜ್ಞಾನದ ಮಾದರಿಗಳನ್ನು ಪ್ರದರ್ಶಿಸಿದರು. ಈ ಕಾರ್ಯಕ್ರಮದಲ್ಲಿ ಬೆಟ್ಟದಹಳ್ಳಿ ಗವಿಮಠದ ಶ್ರೀ ಚಂದ್ರಶೇಖರ ಸ್ವಾಮೀಜಿ ಉಪಸ್ಥಿತರಿದ್ದರು.

# ಕಾಡುಗೊಲ್ಲ ಮಹಿಳೆಯರನ್ನು ಮುಖ್ಯವಾಹಿನಿಗೆ ತರಬೇಕು: ಪ್ರೊ.ವೈ.ಎಸ್.ಸಿದ್ದೇಗೌಡ

**ತುಮಕೂರು:** ಕಾಡುಗೊಲ್ಲ ಮಹಿಳೆಯರನ್ನು ಮುಖ್ಯವಾಹಿನಿಗೆ ತರುವ ಕೆಲಸವಾಗಬೇಕು ಎಂದು ತುಮಕೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ವೈ. ಎಸ್. ಸಿದ್ದೇಗೌಡ ತಿಳಿಸಿದರು.

ತುಮಕೂರು ವಿಶ್ವವಿದ್ಯಾನಿಲಯದ ಜುಂಜಪ್ಪ ಅಧ್ಯಯನ ಪೀಠದ ವತಿಯಿಂದ ಕಲಾ ಕಾಲೇಜಿನ ಸಭಾಂಗಣದಲ್ಲಿ ಗುರುವಾರ ಹಮ್ಮಿಕೊಳ್ಳಲಾಗಿದ್ದ ಡಾ. ಎಚ್. ಆರ್. ರೇಣುಕಾ ಅವರ ‘ಕಾಡುಗೊಲ್ಲ ಮಹಿಳೆ: ಸಾಂಸ್ಕೃತಿಕ ಸಂಕಥನ’ ಸಂಶೋಧನ ಕೃತಿ ಬಿಡುಗಡೆ ಮಾಡಿ ಮಾತನಾಡಿದರು.

ಕಾಡುಗೊಲ್ಲ ಮಹಿಳೆಯರ ಸಮಸ್ಯೆಗಳನ್ನು ಗುರುತಿಸಿ, ಅವರನ್ನು ಮುಖ್ಯವಾಹಿನಿಗೆ ತರಲು ಪ್ರಯತ್ನಿಸಬೇಕು. ಸಂಶೋಧನೆಗಳ ಫಲಿತಾಂಶ ಸಮಾಜವನ್ನು ತಲುಪಬೇಕು ಎಂದರು.

ಅಧ್ಯಾಪಕರು ಅಧ್ಯಯನ, ಅಧ್ಯಾಪನ, ಸಂಶೋಧನೆ, ಪ್ರಕಟಣೆಗಳಲ್ಲಿ ತೊಡಗಿಕೊಂಡರೆ ಮಾತ್ರ ಅಭ್ಯುದಯ ಸಾಧ್ಯ. ಪುಸ್ತಕ ಪ್ರಕಟಿಸಿದರೆ ಸಾಲದು, ಅದನ್ನು ಎಷ್ಟು ಮಂದಿ ಓದುತ್ತಾರೆ ಎಂಬುದೂ ಮುಖ್ಯ ಎಂದರು.

ವಿಶೇಷ ಉಪನ್ಯಾಸ ನೀಡಿದ ಸಾಹಿತಿ ಡಾ. ಡಾ.ಜಿ.ವಿ.ಆನಂದ ಮೂರ್ತಿ ಮಾತನಾಡಿ, ಇತ್ತೀಚಿಗೆ ಮೌಢ್ಯತೆ ಗ್ರಾಮೀಣ ಭಾಗದ ಅನಕ್ಷರಸ್ಥರು ಬುಡಕಟ್ಟು ಜನಾಂಗಕ್ಕಿಂತ ವಿದ್ಯಾವಂತರು ಹೆಚ್ಚು ವಾಸಿಸುವ ನಗರಗಳಲ್ಲಿಯೇ ಹೆಚ್ಚಿದೆ. ಬುಡಕಟ್ಟು ಜನಾಂಗ ಕೆಳ ಸ್ಥರದಲ್ಲಿ ಇರುವ ಜಾತಿ, ಬುಡಕಟ್ಟುಗಳನ್ನು ಪೂರ್ವಾಗ್ರಹ ಪೀಡಿತರಾಗದೆ, ಮಾನವೀಯ ನೆಲೆಯಲ್ಲಿ ಮತ್ತು ಅಧ್ಯಯನಶೀಲರಾಗಿ ಕಂಡಾಗ ಮಾತ್ರ ಅವರಲ್ಲಿನ ಜನಪದ ಸಾಹಿತ್ಯ, ಪರಿಸರ ಪ್ರಜ್ಞೆ, ಮಾನವೀಯ ಲಕ್ಷಣಗಳು ಹೆಚ್ಚು ಪ್ರಚಲಿತವಾಗುತ್ತವೆ ಎಂದರು.

ಕಾಡುಗೊಲ್ಲ ಜನಾಂಗದ ಸಂಪ್ರದಾಯ ಆಚರಣೆಗಳನ್ನು ಪರಿಚಯಿಸುವ ಪ್ರಥಮ ಸಂಶೋಧನಾ ಕೃತಿ ಇದಾಗಿದೆ. ಸಮಾಜದಲ್ಲಿನ ಅಲಕ್ಷಿತ ಸಮುದಾಯದ ಮಹಿಳೆಯರ ಕುರಿತು ಇನ್ನಷ್ಟು ಅಧ್ಯಯನ ನಡೆಯಬೇಕಿದೆ ಎಂದರು.

ಅಸಮಾನತೆ, ಶ್ರೇಣೀಕರಣದ ನಡೆಯುವೆಯೂ ಸಮಾಜದಲ್ಲಿ ಅಲೆಮಾರಿ ಬುಡಕಟ್ಟುಗಳ ಕೊಡುಕೊಳ್ಳುವಿಕೆಯನ್ನು ಕಾಬಹುದು. ಕಾಡುಗೊಲ್ಲ ಮಹಿಳೆಯರಲ್ಲಿ ವೈಧವ್ಯದ ಹಣೆಪಟ್ಟಿಯನ್ನು ಕಾಣುವುದೇ ಇಲ್ಲ. ಅವರು ಎಲ್ಲ ಮಂಗಳ ಕಾರ್ಯದಲ್ಲಿ ಭಾಗವಹಿಸಬಹುದು. ಕಾಡುಗೊಲ್ಲ ಬುಡಕಟ್ಟು ಸಮುದಾಯಗಳಿಗೆ ಆಧುನಿಕ ಸೌಲಭ್ಯಗಳು ದೊರೆಯುವಂತಹ ಅಧ್ಯಯನಗಳು ನಡೆಯಬೇಕು ಎಂದರು.

ಸಹಪ್ರಾಧ್ಯಾಪಕ ಬಿ. ಕರಿಯಣ್ಣ ಮಾತನಾಡಿ, ಭಾರತಕ್ಕೆ ಸಂವಿಧಾನ ಇರುವಂತೆ ಪ್ರತಿಯೊಂದು ಬುಡಕಟ್ಟು ತನ್ನದೇ ಆದ ಸಂವಿಧಾನಗಳನ್ನು ಹೊಂದಿವೆ. ಅದರಲ್ಲಿ ಒಂದು ಕಟ್ಟುಪಾಡನ್ನು ತಪ್ಪಿದರೂ ಹಟ್ಟಿಯಿಂದ ಹೊರಹಾಕುತ್ತಾರೆ. ಕಾಡುಗೊಲ್ಲ ಜನರು ಪ್ರಾಣಿ, ಪಕ್ಷಿಗಳನ್ನು ಬಂಧು ಬಳಗದಂತೆ ನೋಡಿಕೊಳ್ಳುತ್ತಾರೆ. ಕಾಡುಗೊಲ್ಲ ಮಹಿಳೆಯ ಸಮಸ್ಯೆಯನ್ನು ಅಧ್ಯಯನದಿಂದಲೇ ತಿಳಿಯಬೇಕು ಎಂದರು.

ಪ್ರಾಂಶುಪಾಲ ಕೆ. ರಾಮಚಂದ್ರಪ್ಪ ಅಧ್ಯಕ್ಷತೆ ವಹಿಸಿದ್ದರು. ಉಪಪ್ರಾಂಶುಪಾಲ ಟಿ.ಎನ್.ಹರಿಪ್ರಸಾದ್, ಡಾ.ಎಸ್.ಶಿವಣ್ಣ ಬೆಳವಾಡಿ, ವೆಂಕಟರೆಡ್ಡಿ ರಾಮರೆಡ್ಡಿ, ಡಾ. ಎಚ್. ಆರ್. ರೇಣುಕ ಉಪಸ್ಥಿತರಿದ್ದರು.

ಕಾವ್ಯ ಎನ್.



ವಿಶ್ವವಿದ್ಯಾನಿಲಯ ಕಲಾ ಕಾಲೇಜಿನ ಸಭಾಂಗಣದಲ್ಲಿ ಡಾ. ಎಚ್.ಆರ್. ರೇಣುಕಾ ಅವರ ‘ಕಾಡುಗೊಲ್ಲ ಮಹಿಳೆ: ಸಾಂಸ್ಕೃತಿಕ ಸಂಕಥನ’ ಕೃತಿಯನ್ನು ಕುಲಪತಿ ಪ್ರೊ. ವೈ. ಎಸ್. ಸಿದ್ದೇಗೌಡ ಬಿಡುಗಡೆಗೊಳಿಸಿದರು.

# ‘ಉನ್ನತ ಶಿಕ್ಷಣವು ಕೌಶಲ್ಯಾಧಾರಿತವಾಗಿರಬೇಕು’



ಬೆಳಗಾವಿ ರಾಣಿಚನ್ನಮ್ಮ ವಿವಿ ಕುಲಪತಿ ಪ್ರೊ. ಎಂ. ರಾಮಚಂದ್ರ ಗೌಡ ಅವರನ್ನು ತುಮಕೂರು ವಿವಿಯಲ್ಲಿ ಸನ್ಮಾನಿಸಲಾಯಿತು. ಪ್ರೊ. ವೈ. ಎಸ್. ಸಿದ್ದೇಗೌಡ, ಪ್ರೊ. ಕೆ. ಎನ್. ಗಂಗಾನಾಯಕ್, ಪ್ರೊ. ಪಿ. ಪರಮಶಿವಯ್ಯ, ಪ್ರೊ. ಬಿ. ಶೇಖರ್, ಪ್ರೊ. ಜಿ. ಸುದರ್ಶನರೆಡ್ಡಿ, ಡಾ. ಎಸ್. ದೇವರಾಜಪ್ಪ ಇದ್ದಾರೆ.

**ತುಮಕೂರು:** ಶಿಕ್ಷಣ ವ್ಯವಸ್ಥೆಯಲ್ಲಿರುವ ಕೋರ್ಸ್‌ಗಳು ಕೇವಲ ಸರ್ಟಿಫಿಕೇಟ್ ನೀಡಲು ಸೀಮಿತವಾಗಿವೆ. ವೃತ್ತಿ ಜೀವನಕ್ಕೆ ಅವಶ್ಯವಾಗಿರುವ ಕೌಶಲ್ಯಗಳನ್ನು ನೀಡುತ್ತಿಲ್ಲ. ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಕೌಶಲ್ಯಾಧಾರಿತ ಶಿಕ್ಷಣ ಅನಿವಾರ್ಯ ಎಂದು ಬೆಳಗಾವಿ ರಾಣಿಚನ್ನಮ್ಮ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎಂ. ರಾಮಚಂದ್ರ ಗೌಡ ಅಭಿಪ್ರಾಯಪಟ್ಟರು.

ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಹೊಸದಾಗಿ ಆರಂಭಿಸಲಾಗಿರುವ ಎಂ.ಕಾಂ. (ಇನ್ಫಾರ್ಮೇಶನ್ ಸಿಸ್ಟಮ್ಸ್) ಹೊಸ ಕೋರ್ಸ್ ಅನ್ನು ಬುಧವಾರ ಉದ್ಘಾಟಿಸಿ ಮಾತನಾಡಿದರು.

ನಮ್ಮ ವಿಶ್ವವಿದ್ಯಾನಿಲಯಗಳಿಂದ ಪದವಿ ಪಡೆದು ಹೊರಬರುತ್ತಿರುವವರಲ್ಲಿ ಶೇ. 10ರಷ್ಟು ಜನರು ಮಾತ್ರ ಉದ್ಯೋಗ ಪಡೆಯಲು ಅರ್ಹರಾಗಿದ್ದಾರೆ. ಈ ನಿಟ್ಟಿನಲ್ಲಿ ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಆರಂಭವಾಗಿರುವ ಎಂ.ಕಾಂ. (ಇನ್ಫಮೇಶನ್ ಸಿಸ್ಟಮ್) ಕೋರ್ಸ್ ತನ್ನ ಪ್ರಾಯೋಗಿಕ ಆಯಾಮಗಳಿಂದ ಸಹಕಾರಿಯಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ತುಮಕೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ವೈ ಎಸ್ ಸಿದ್ದೇಗೌಡ ಮಾತನಾಡಿ, ನಮ್ಮ ಕೈಗೆಟುಕುವ ಸಂಪನ್ಮೂಲಗಳನ್ನು ಬಳಸಿಕೊಂಡೇ ನಮ್ಮ ಗುರಿ ಸಾಧಿಸಲು ಸಾಧ್ಯವಿದೆ ಎಂದರು.

ಕಾಮರ್ಸ್ ಮತ್ತು ಮ್ಯಾನೇಜ್‌ಮೆಂಟ್ ಇಂದಿನ ಯುಗದಲ್ಲಿ ನಾವು ಉಸಿರಾಡುವ ಗಾಳಿಯಷ್ಟು ಅನಿವಾರ್ಯ. ಅದೊಂದು ಸಾರ್ವತ್ರಿಕ ಮನ್ನಣೆಯಿರುವ ಕೋರ್ಸ್ ಎಂದರು.

ಉಪನ್ಯಾಸಕರು ವಿದ್ಯಾರ್ಥಿ ಜೀವನ ಮತ್ತು ವೃತ್ತಿ ಜೀವನ ಎರಡನ್ನು ಬೆಸೆಯುವ ಸೇತುವೆಯಾದಾಗ ಮಾತ್ರ ಅವರ ಸೇವೆ ಸಾರ್ಥಕವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಸಮಾರಂಭದಲ್ಲಿ ಕುಲಸಚಿವ ಪ್ರೊ. ಕೆ. ಎನ್. ಗಂಗಾನಾಯಕ್, ಹಣಕಾಸು ಅಧಿಕಾರಿ ಪ್ರೊ. ಪಿ. ಪರಮಶಿವಯ್ಯ, ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ. ಬಿ. ಶೇಖರ್, ಪ್ರಾಧ್ಯಾಪಕ ಡಾ. ಜಿ. ಸುದರ್ಶನ ರೆಡ್ಡಿ, ಕೋರ್ಸ್ ಸಂಯೋಜಕ ಡಾ. ಎಸ್. ದೇವರಾಜಪ್ಪ ಉಪಸ್ಥಿತರಿದ್ದರು.

ಕವನ ಕೆ.ವಿ.

## ಸಂಪಾದಕೀಯ

### ಭಾರತದತ್ತ ವಿಶ್ವದ ಚಿತ್ತ

ಏಳು ದಿನಗಳ ಪ್ರವಾಸಕ್ಕಾಗಿ ಅಮೆರಿಕಕ್ಕೆ ತೆರಳಿದ ಪ್ರಧಾನಿ ನರೇಂದ್ರ ಮೋದಿ ಹ್ಯೂಸ್ಟನ್ ಸ್ಟೇಡಿಯಂನಲ್ಲಿ ಸೆ.23 ರಂದು ನಡೆದ 'ಹೌಡಿ ಮೋದಿ' ಕಾರ್ಯಕ್ರಮದಲ್ಲಿ ಭಾಗವಹಿಸಿ ವಿಶ್ವದ ಗಮನ ಸೆಳೆದಿದ್ದಾರೆ. ಕನ್ನಡವೂ ಸೇರಿದಂತೆ ಹತ್ತು ಭಾಷೆ ಮಾತನಾಡುವ ಮೂಲಕ ಇಡೀ ಭಾರತೀಯರ ಹೃದಯ ಗೆದ್ದಿದ್ದಾರೆ.

ಕಾರ್ಯಕ್ರಮದಲ್ಲಿ ಸೇರಿದ್ದ 50 ಸಾವಿರಕ್ಕೂ ಹೆಚ್ಚು ಅನಿವಾಸಿ ಭಾರತೀಯರನ್ನು ಉದ್ದೇಶಿಸಿ ಮಾತನಾಡಿದ ಮೋದಿ, 'ಹೌಡಿ ಮೋದಿ' ಅಂತ ಕೇಳಿದವರಿಗೆ 'ಚೆನ್ನಾಗಿದ್ದೇನೆ' ಎಂದು ಉತ್ತರಿಸಿದ್ದಾರೆ. ಹೌಡಿ ಮೋದಿ ಎಂದರೆ 'ಹೌ ಡೂ ಯು ಡು ಮೋದಿ' ಎಂದರ್ಥ.

ವಿಶ್ವದ ಎರಡು ಅತಿ ದೊಡ್ಡ ಪ್ರಜಾಪ್ರಭುತ್ವ ಹಾಗೂ ಅಣುಶಕ್ತಿ ದೇಶ ಒಂದಾಗಿದ್ದು ಎರಡು ದೇಶಗಳ ಬಲವನ್ನು ಮತ್ತಷ್ಟು ಹೆಚ್ಚಿಸಿದೆ. ಈ ಮೂಲಕ ಎರಡು ದೇಶಗಳ ಜನರ ಶ್ರೇಯೋಭಿವೃದ್ಧಿ ಆಗಲಿದೆ ಎಂದು ಮೋದಿ ಅಭಿಪ್ರಾಯ ಪಟ್ಟಿದ್ದಾರೆ. ಎರಡು ಬಲಿಷ್ಠ ದೇಶಗಳು ಜಾಗತಿಕ ವೇದಿಕೆಯಲ್ಲಿ ಬಲಪ್ರದರ್ಶನ ಮಾಡಿದ್ದು ವಿಶ್ವಕ್ಕೆ ಹೊಸ ಸಂದೇಶವನ್ನೂ ರವಾನಿಸಿದೆ. ಇದೇ ವೇಳೆ 'ಅಬ್ ಕೀ ಬಾರ್ ಟ್ರಂಪ್ ಸರ್ಕಾರ್' ಎಂದು ಮೋದಿ ಘೋಷಣೆ ಕೂಗಿದ್ದು ಹಲವು ಬಗೆಯ ಚರ್ಚೆಗಳಿಗೆ ಎಡೆಮಾಡಿದೆ.

ಭಾರತದ ವಿರುದ್ಧ ಪಾಕಿಸ್ತಾನ ರಾಜಕಾರಣ ಮಾಡುತ್ತಿದೆ ಮತ್ತು ಅಶಾಂತಿ ಹೆಚ್ಚಿಸುತ್ತಿದೆ ಎಂದು ಪಾಕಿಸ್ತಾನಕ್ಕೆ ಇದೇ ವೇಳೆ ಪ್ರಧಾನಿ ಪರೋಕ್ಷ ಟಾಂಗ್ ನೀಡಿದ್ದಾರೆ. ಭಯೋತ್ಪಾದನೆಯ ವಿರುದ್ಧದ ಭಾರತದ ಹೋರಾಟಕ್ಕೆ 'ಹೌಡಿಮೋದಿ' ವೇದಿಕೆಯಲ್ಲಿ ಅಂತಾರಾಷ್ಟ್ರೀಯ ಬೆಂಬಲವೂ ದೊರೆತಂತಾಗಿದೆ.

ಸಾಂಸ್ಕೃತಿಕ ಕಾರ್ಯಕ್ರಮ ನೀಡಿದ್ದ ಅನಿವಾಸಿ ಭಾರತೀಯ ಮಕ್ಕಳ ಎದುರು ಹಾದು ಹೋಗುತ್ತಿದ್ದ ಟ್ರಂಪ್ ಮತ್ತು ಮೋದಿ ಜೊತೆಗೆ ಉತ್ತರ ಕನ್ನಡದ ಶಿರಸಿ ಬಾಲಕ ಸಾತ್ವಿಕ್ ಹೆಗಡೆ ಸೆಲ್ಫೀ ಕ್ಲಿಕ್ಕಿಸಿಕೊಂಡು ಎಲ್ಲರ ಗಮನ ಸೆಳೆದಿದ್ದಾನೆ.

# ಬದುಕಿಗೆ ದಾರಿ ತೋರಿದ ಕಲಾರಾಧನೆ

"ಶ್ರದ್ಧಾವಾನ್ ಲಭತೇ ಜ್ಞಾನಂ" ಎಂಬಂತೆ, ಶ್ರದ್ಧೆ ಜ್ಞಾನದ ಮೆಟ್ಟಿಲಾಗುತ್ತದೆ. ಸಂಗೀತ ಒಂದು ಕಲೆ, ಕಲೆಯೆಂಬುದು ಸುಖಾಸುಮ್ಮನೆ ವಶವಾಗುವುದಿಲ್ಲ. ಕಲೆ ಯಾವತ್ತೂ ಸಾಧಕನ ಸ್ವತ್ತಾಗುತ್ತದೆ. ಸಂಗೀತವೆಂಬ ಈ ಕಲೆಯನ್ನು ತಮ್ಮದಾಗಿಸಿಕೊಂಡು ಬಾಲ್ಯದಿಂದಲೇ ಇದರ ಆರಾಧಕರಾದವರು ಎನ್. ಹನುಮಂತರಾಜು.

ವಿದ್ಯಾರ್ಥಿ ದೆಸೆಯಿಂದಲೇ ಕಲೆಯಲ್ಲಿ ನೈಪುಣ್ಯತೆಯನ್ನು ಸಂಪಾದಿಸಿದವರು, ತುಮಕೂರಿನ ಸಮೀಪದ ಮರಳೇನಹಳ್ಳಿ ಇವರ ಸ್ವಗ್ರಾಮ. ಸಂಗೀತವನ್ನೇ ಜೀವನವನ್ನಾಗಿಸಿಕೊಂಡ ಇವರು ತಮ್ಮ 14ನೇ ವಯಸ್ಸಿನಲ್ಲಿಯೇ, ಹಾ॥ಮಾ॥ ಚಿಕ್ಕನರಸಿಯಪ್ಪನವರಲ್ಲಿ ಹಾರ್ಮೋನಿಯಂ ಕಲಿಯಲು ಪ್ರಾರಂಭಿಸಿದರು. ಜೊತೆಗೆ ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಸಂಗೀತ ವಿದ್ವಾನ್ ಪಿ.ರಾಮಯ್ಯ ಮತ್ತು ಶ್ರೀ ಪಿ. ಪ್ರಸನ್ನಕುಮಾರ್ ಅವರಲ್ಲಿ ಅಭ್ಯಾಸ ಮಾಡಿ ಉತ್ತಮ ಶಾಸ್ತ್ರೀಯ ಸಂಗೀತ ಹಾಡುಗಾರರೆನಿಸಿದರು.

ಪ್ರತಿಭಾ ಸಂಪನ್ನ, ಮಧುರ ಕಂಠದ ಗಾಯಕರಾದ ಇವರು, ಹಾಡುಗಾರಿಕೆ ಮತ್ತು ಹಾರ್ಮೋನಿಯಂ ನುಡಿಸುವಿಕೆ ಎರಡರಲ್ಲೂ ಹಿಡಿತ ಸಾಧಿಸಿ, ಸುಶ್ರಾವ್ಯ ಹಾಡುಗಾರರೆನಿಸಿ, ಶ್ರೇಷ್ಠ ಹಾರ್ಮೋನಿಯಂ ವಾದಕರೆನಿಸಿಕೊಂಡರು.

ವೃತ್ತಿಯಲ್ಲಿ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಯಾಗಿ, ಆರೋಗ್ಯ ಇಲಾಖೆಯಲ್ಲಿ ಪ್ರಾಮಾಣಿಕವಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಸರ್ಕಾರಿ ವೃತ್ತಿಯಲ್ಲಿದ್ದರೂ ಪ್ರವೃತ್ತಿಯಲ್ಲಿ ನಾಟಕ ನಿರ್ದೇಶಕರಾಗಿದ್ದಾರೆ. ಇವರ ನಿರ್ದೇಶನದಲ್ಲಿ ಪೌರಾಣಿಕ ನಾಟಕಗಳಾದ, ಶ್ರೀರಾಮಾಯಾಣ, ಕುರುಕ್ಷೇತ್ರ, ಸತ್ಯ ಹರಿಶ್ಚಂದ್ರ, ಪ್ರಚಂಡರಾಮ, ಮೂರುವರೆ ವಜ್ರಗಳು ಹಲವು ಬಾರಿ ರಂಗ ಪ್ರಯೋಗದಲ್ಲಿ ಮೂಡಿ ಬಂದಿವೆ. ತಮ್ಮ ವೃತ್ತಿಗೆ ಯಾವುದೇ ಧಕ್ಕೆ ಉಂಟಾಗದಂತೆ ನಾಟಕ ರಂಗದಲ್ಲಿ ಮುಂದುವರೆಯುತ್ತಿದ್ದಾರೆ. ರಂಗಭೂಮಿಯತ್ತ ಒಲವು ಕಡಿಮೆಯಾಗುತ್ತಿರುವ ಸಂದರ್ಭದಲ್ಲಿ ಸಂಗೀತದ ಧ್ರುವತಾರೆಯಂತೆ ಮಿಂಚುತ್ತಿದ್ದಾರೆ.

ಪ್ರಾಮಾಣಿಕ ಸೇವೆಯಲ್ಲಿ ತೊಡಗಿರುವ ಇವರು, ಸೇವಾದೃಷ್ಟಿಯಲ್ಲಿ ಉತ್ತಮ ಆರೋಗ್ಯಧಿಕಾರಿ ಎಂದು ಹೆಸರು ಮಾಡಿರುವ ಇವರು ಅನೇಕ ರೋಗ ರುಜಿನಗಳಿಗೆ ಸಂಬಂಧಿಸಿದ ಹಾಡುಗಳನ್ನು ಸ್ವತಃ



ರಚಿಸಿ, ರಾಗ ಸಂಯೋಜನೆ ಮಾಡಿ, ಜನರಲ್ಲಿ ಆರೋಗ್ಯದ ಕುರಿತಾಗಿ ಜಾಗೃತಿ ಮೂಡಿಸುತ್ತಿದ್ದಾರೆ. ಚಿಕುನ್ ಗುನ್ಯಾ, ಡೆಂಗ್ಯೂ, ಮಲೇರಿಯಾ, ನೀರು, ಶೌಚಾಲಯ, ಇತ್ಯಾದಿ ವಿಷಯಗಳನ್ನು ಕುರಿತಾಗಿ ಕ್ಷೇತ್ರ ಭೇಟಿ ಸಮಯದಲ್ಲಿ ಜನರಿಗೆ ಅರಿವು ಮೂಡಿಸುವ ಕಾರ್ಯವನ್ನು ಮಾಡುತ್ತಿದ್ದಾರೆ. ಇವರ ಈ ಸೇವೆಗಾಗಿ ಆರೋಗ್ಯ ಇಲಾಖೆಯು "ಉತ್ತಮ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ" ಎಂಬ ಬಿರುದನ್ನು ನೀಡಿದೆ.

ನಾಟಕ ನಿರ್ದೇಶನವನ್ನು ಪದವಿ ವ್ಯಾಸಂಗದಲ್ಲಿಯೇ ಆರಂಭಿಸಿದ ಇವರು ರಾಮಾಯಾಣ , ಸತ್ಯ ಹರಿಶ್ಚಂದ್ರ, ಕುರುಕ್ಷೇತ್ರ, ಮೂರುವರೆ ವಜ್ರಗಳು, ಪ್ರಚಂಡ ರಾವಣ, ಸೇರಿದಂತೆ 37 ಕ್ಕೂ ಹೆಚ್ಚೂ ನಾಟಕಗಳನ್ನು ಕಲಿಸಿ ಯಶಸ್ವಿ ನಾಟಕ ಮಾಸ್ಟರ್ ಎಂಬ ಕೀರ್ತಿಗೆ ಭಾಜನರಾಗಿದ್ದಾರೆ. ಅಲ್ಲದೆ ರಾಮಾಯಣ, ಸತ್ಯ ಹರಿಶ್ಚಂದ್ರ, ಕುರುಕ್ಷೇತ್ರ ನಾಟಕಗಳಲ್ಲಿ ಸ್ವತಃ ಪಾತ್ರಗಳನ್ನು ಮಾಡಿ ಜನರ ಮನಸೂರೆಗೊಂಡಿದ್ದಾರೆ. ಇವರ ನಿರ್ದೇಶನದ ಮೊದಲ ನಾಟಕ "ರಾಜಾ ಸತ್ಯ ಹರಿಶ್ಚಂದ್ರ".

ಶಿಕ್ಷಣ ಇಲಾಖೆಯಲ್ಲಿ ನಡೆಯುವ ಪ್ರತಿಭಾ ಕಾರಂಜಿ ಸ್ಪರ್ಧೆಗಳಿಗೆ ಮತ್ತು ಎಸ್.ಐ.ಟಿ ಸ್ಪಂದನ ನಾಟಕದ ವಿಭಾಗದ ತೀರ್ಪುಗಾರರಾಗಿ ಕಾರ್ಯ ನಿರ್ವಹಿಸಿದ್ದಾರೆ. ಅಂತರ ಕಾಲೇಜು ಸ್ಪರ್ಧೆಗಳಲ್ಲಿ ಭಾಗವಹಿಸಿ ಹಲವಾರು ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡಿದ್ದಾರೆ.

ರೇಡಿಯೋ ಸಿದ್ಧಾರ್ಥ ಸಮುದಾಯ ಬಾನುಲಿ ಕೇಂದ್ರದಲ್ಲಿ ಆರೋಗ್ಯಕ್ಕೆ ಸಂಬಂಧಿಸಿದ ಹಾಡುಗಳನ್ನು ಹಾಡಿದ್ದಾರೆ. "ಕ್ಷಯ ನಿನಗಿಲ್ಲ ಜಯ" ನಾಟಕವನ್ನು ನಿರ್ದೇಶಿದ್ದಾರೆ. ಆರೋಗ್ಯ ಸಂಬಂಧಿಸಿದ ಹಲವಾರು ರೋಗಗಳ ಬಗ್ಗೆ ಅರಿವು ಮೂಡಿಸಲು ತಜ್ಞ ವೈದ್ಯರೊಂದಿಗೆ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಶಾಲೆಗಳಲ್ಲಿ ಆರೋಗ್ಯದ ಅರಿವು ಮೂಡಿಸಲು ಸಾಹಿತ್ಯ ರಚಿಸಿ ಹಾಡುವುದರ ಮೂಲಕ ಮಕ್ಕಳಿಗೆ ಆರೋಗ್ಯದ ಬಗ್ಗೆ ಶಿಕ್ಷಣ ನೀಡುತ್ತಿದ್ದಾರೆ.

ರಂಗಭೂಮಿಯಲ್ಲಿ ಇವರ ಸಾಧನೆಗಾಗಿ "ರಜತ ಕಿರೀಟ" ಮತ್ತು "ರಾಷ್ಟ್ರಕವಿ ಕುವೆಂಪು ಪ್ರಶಸ್ತಿ" ಪುರಸ್ಕೃತರಾಗಿದ್ದಾರೆ. ಪ್ರಸ್ತುತ ನಾಗಾರ್ಜುನ ಕಲಾ ಸಂಘ(ರಿ) ಮತ್ತು ಜಿಲ್ಲಾ ರಂಗಭೂಮಿಯ ಕಲಾವಿದರ ಸದಸ್ಯರಾಗಿದ್ದು ಮತ್ತು ಮಾರುತಿ ಗೆಳೆಯರ ಬಳಗದ ಕ್ರಿಯಾಶೀಲ ನಿರ್ದೇಶಕರಾಗಿದ್ದಾರೆ. ಇವರ ಕಲಾ ಪ್ರತಿಭೆಯನ್ನು ಮೆಚ್ಚಿ ಹಲವಾರು ಸಂಘ ಸಂಸ್ಥೆಗಳು ಗೌರವಿಸಿದೆ.

ಕಾವ್ಯ ಎನ್.

# 'ಕೂಲಿಂಗ್ ಗ್ಲಾಸಿನಲ್ಲೊಂದು ನೋಟ'

**ಪುಸ್ತಕ ವಿಮರ್ಶೆ**
**ಚಂದನ್ ಆರ್.**

| | |
|---|---|
| ಪುಸ್ತಕ | : ಕೂಲಿಂಗ್ ಗ್ಲಾಸ್ ಕನಸುಗಳು |
| ಸಂಗ್ರಹ | : ನಿತೀನ್ ನೀಲಕಂಠೆ |
| ಪುಟ | : 104 |
| ಬೆಲೆ | : ರೂ.100 |
| ಪ್ರಕಾಶಕರು | : ಕಾವ್ಯ ಮಿತ್ರ ಪ್ರಕಾಶನ (ಹುಬ್ಬಳ್ಳಿ) |
| ವರ್ಷ | : 2018 |

'ಕೂಲಿಂಗ್ ಗ್ಲಾಸ್ ಕನಸುಗಳು' ಕವನಸಂಕಲನದ ಮುನ್ನುಡಿಯಲ್ಲಿ ಸಾಹಿತಿ ಪಾಪಗುರು ಅವರು, ನಿತೀನ್ ನೀಲಕಂಠೆ ಅವರ ಕವನದ ಸಾಲುಗಳಲ್ಲಿ ವ್ಯಕ್ತವಾಗಿರುವ ಮಾನವ ಜೀವನದ ಅನಿಶ್ಚಿತತೆಯನ್ನು ನೆನೆಯುತ್ತಾರೆ. ಅವರು "ಕಳೆದ ಜೀವ ಕೆಡುಕು ಮಾಡಿತು, ಸತ್ಯವನರಿಯದೇ ದೂರಮಾಡಿತು, ನೊಂದ ಜೀವ ಶರಣಾಯಿತು, ಕಣ್ಣುಗಳ ಕತ್ತಲಲ್ಲಿ ಮುಳುಗಿತು" ಮುಂತಾದ ಸಂಗ್ರಹ ಕವನಗಳು ಹರೆಯದ ಮನಗಳ ಕನಸುಗಳಿಗೆ ಕನ್ನಡಿ ಹಿಡಿದಂತಿದೆ ಎಂದಿದ್ದಾರೆ.

"ನಿನ್ನೊಲುವಿನ ಬಣ್ಣ, ಓ ಗುಲಾಬಿ, ನೀ ಜೊತೆಗಿರಲು" ಕವನಗಳು ಪ್ರೇಮಿಗಳ ಹೃದಯಕ್ಕೆ ಸಾಂತ್ವನ ನೀಡುತ್ತವೆ. ಇಲ್ಲಿ ಗುಲಾಬಿಯು ಪ್ರೇಮಿಗಳ ತುಂಟಾಟ, ಸರಸ ಮತ್ತು ಯಾವುದೇ ಕಲ್ಮಶವಿಲ್ಲದ ಹೃದಯಗಳನ್ನು ಬೆಸೆಯುವ ಕೆಲಸ ಮಾಡುತ್ತದೆ ಎಂದು ಬೆಂಗಳೂರು ಮೂದಲ್ ವಿಜಯ್ ಆಶಯದಲ್ಲಿ ವರ್ಣಿಸಿದ್ದಾರೆ.




ನಿತೀನ್ ಗುರುವಿನ ಮಹತ್ವದ ಕುರಿತು ತಿಳಿಸಿರುವ ಕವನದ ತುಣುಕು ಹೀಗಿದೆ, 'ಕರುಣೆಯ ಸಾಗರ ನೀನು, ಆ ದೇವರ ಇನ್ನೊಂದು ರೂಪ ನೀ, ಕರುಣಿಸು ಗುರುವೇ ನನ್ನ ಬಾಳ ಉದ್ಧರಿಸು ನೀ, ಗುರುವೇ ಪರಮಪೂಜ್ಯ ಗುರುವೇ ನಿನಗೆ ವಂದನೆ.. ಈ ಸಾಲುಗಳು ಜನರಲ್ಲಿ ಜಾಗೃತಿ ಮೂಡಿಸುತ್ತವೆ.

ನಿತೀನ್ ನೀಲಕಂಠೆಯವರು ಬೀದರ್ ಜಿಲ್ಲೆಯ ಬಸವಕಲ್ಯಾಣ ಗ್ರಾಮದ ಶಿವರಾಜ ನೀಲಕಂಠೆ ಮತ್ತು ಸೋನಾಲಿ ನೀಲಕಂಠೆಯವರ ಮಗನಾಗಿ ಜನಿಸಿದರು. ವಿಜ್ಞಾನ ಘಟಕದ ಜೀವಶಾಸ್ತ್ರ ವಿಭಾಗದ ಅಧ್ಯಾಪಕರಾಗಿದ್ದಾರೆ. 'ಕೂಲಿಂಗ್ ಗ್ಲಾಸ್ ಕವನಗಳು' ಇವರ ಮೊದಲ ಕವನ ಸಂಕಲನ.

ವ್ಯಕ್ತಿಯು ಯೌವ್ವನದಿಂದ ಸಂಸಾರದ ಜಂಜಾಟದಲ್ಲಿ ಬಿದ್ದು ಅನುಭವಿಸುವ ಕಷ್ಟ, ಸುಖಗಳವರೆಗಿನ ವಿಷಯವನ್ನು ಹಿಡಿದಿಟ್ಟಿದ್ದಾರೆ.

ಯೌವ್ವನದ ವಯಸ್ಸಿನಲ್ಲಿ ಕಾಲೇಜು, ಸ್ನೇಹಿತರು, ಗೆಳತಿ, ಪ್ರೇಯಸಿ ಎನ್ನುವಂತೆ ಕಾಲಹರಣ ಮಾಡುವುದು. ಪ್ರೇಯಸಿ ಕೈಕೊಟ್ಟಳೆಂದು ಸನ್ಯಾಸಿ ಜೀವನ ಶುರುಮಾಡುವುದು, ಈ ಸಂದರ್ಭದಲ್ಲಿ ಗುರುಗಳ ಸಲಹೆ ಕೇಳಿ ತನ್ನ ಜೀವನದ ಮಾರ್ಗ ಬದಲಾಯಿಸಿಕೊಳ್ಳುವುದು, ಯೌವ್ವನ ಕಳೆದ ನಂತರ ದುಡಿಮೆ ಕಡೆ ಜಾರುವುದು, ಇದರ ಜೊತೆಯಲ್ಲಿ ಸಂಗಾತಿ ಆಯ್ಕೆ ಮಾಡಿಕೊಂಡು ತಮ್ಮ ಉತ್ತಮ ಜೀವನ ಸಾಗಿಸುವ ಚಿತ್ರಣವನ್ನು ವಿವರಿಸಿದ್ದಾರೆ.

ಶ್ರೀ ನೀಲಕಂಠೆಯವರ ಕವನಗಳು ರೂಪಕ ಮತ್ತು ಉಪಮೆಗಳಿಂದ ಕೂಡಿವೆ. ತಮ್ಮ ಜೀವನದ ಅನುಭವದಲ್ಲಿ ಕಂಡ ಘಟನೆಯನ್ನು ಅಕ್ಷರರೂಪದಲ್ಲಿ ವಿವರಿಸಿದ್ದಾರೆ.

ಪ್ರೌಢಾವಸ್ಥೆಯಿಂದ ಯೌವ್ವನಕ್ಕೆ ಕಾಲಿಟ್ಟು ಕಾಲೇಜು ಮೆಟ್ಟಿಲ ತುಳಿದು, 18 ವರ್ಷ ತುಂಬಿದ ಹರೆಯದ ಯವಕ ಯುವತಿಯರು ಓದುವ ಕಡೆ ಹೆಚ್ಚಿನ ಗಮನ ಹರಿಸಿ ಉತ್ತುಂಗಕ್ಕೆ ಏರುವ ಗುರಿ ಹೊಂದಿರುತ್ತಾರೆ. ಹಾಗೆ ಕಾಲೇಜಿನಲ್ಲಿ ಸೀನಿಯರ್ಸ್, ಸ್ನೇಹಿತರು ಮತ್ತು ಗೆಳತಿ ಎಲ್ಲರ ಜೊತೆಯಲ್ಲಿ ಕಾಲೇಜಿಗೆ ಚಕ್ಕರ್ ಹಾಕಿ ಸಿನಿಮಾ ಕ್ಲಬ್ ಮತ್ತು ಟ್ರಿಪ್ ಇತ್ಯಾದಿಗಳನ್ನೂ ಮಾಡಿರುತ್ತಾರೆ. ಇದರ ಜೊತೆಗೆ ಓದುವ ಹಾದಿ ತಪ್ಪಿ ಪ್ರೇಮದ ಪ್ರಯಾಣದ ದಾರಿ ಹಿಡಿಯುವರೂ ಬಹಳ. 'ವೈಯ್ಯಾರೀ, ಸುಂದರಿ, ನೋಡಿದ ಕ್ಷಣವೇ ಮನವ ಸೆಳೆಯುವ ರೂಪಸಿ, ಕಲ್ಪನೆಗೂ ನಿಲುಕದ ವೈಯ್ಯಾರಿ, ಚಂದಿರನಂತೆ ಕಣ್ಣ ಕಾಂತಿ ರೆಪ್ಪೆ ಕುಣಿತಕ್ಕೆ ನಾನು ಭ್ರಾಂತಿ, ಮನದ ಕದವ ತೆರೆದು ಹೃದಯ ಕದ್ದವಳು' ಹೀಗೆ ಪ್ರೀತಿಯ ಸಾಗರಕ್ಕೆ ಧುಮುಕಿ, ತಂದೆ, ತಾಯಿಯರನ್ನೇ ಮರೆತು ತಮ್ಮದೇ ಭ್ರಮೆಯ ಲೋಕ ಸೃಷ್ಟಿಸಿ ಕೊಳ್ಳುತ್ತಾರೆ. ಹೀಗೆ ಯುವಕರ ಹೊಸದೊಂದು ಪ್ರಪಂಚದ ದರ್ಶನವನ್ನೇ ಮಾಡಿಸುತ್ತಾರೆ ಕವಿ.

ಯೌವ್ವನದ ಕಹಿ ಘಟನೆಗಳು ಇಬ್ಬರ ನಡುವಿನ ಸಂಬಂಧ ಹಾಳು ಮಾಡುತ್ತದೆ. ಪ್ರೇಯಸಿ ಕೈಕೊಡುತ್ತಾಳೆ. ಇದನ್ನು ಸಹಿಸಲಾರದೆ ವಿಕಲ್ಪನೆ ಕಣ್ಣಾಯಿತು ನಂಬಿಕೆ ವಿಷವಾಯಿತು, ನಂಬಿ ಕೆಟ್ಟೆ, ದ್ರೋಹ ಕೊಟ್ಟೆ, ಕೈ ಕೊಟ್ಟು ನಡುವೆ ಬಿಟ್ಟೆ, ಮನ ಕಟ್ಟುತಿದೆ ಪ್ರೀತಿಯ ಕಟ್ಟೆ ಎಂದು ಬರೆಯುತ್ತಾರೆ. ಈ ಸಮಯಕ್ಕೆ ಸಂಗಾತಿ ಆಯ್ಕೆ ಮಾಡುವ ಕಾಲ ಬಂದಿತ್ತು. ಜೀವನದಲ್ಲಿ ಎದುರಿಸಿದ ಸಂಗತಿಗಳನ್ನು ನೆನೆದು ಉತ್ತಮ ಸಂಗಾತಿ ಆರಿಸಿಕೊಳ್ಳುತ್ತಾನೆ. ಸ್ವಂತ ಗೂಡುಮಾಡಿ ಗಂಡ ಹೆಂಡತಿ ಮಕ್ಕಳು ಎನ್ನುವಂತೆ ಚಿಕ್ಕ ಸಂಸಾರ ರಚಿಸಿಕೊಳ್ಳುತ್ತಾನೆ. "ದುಡಿದವನಿಗೆ ಗೊತ್ತು ದುಡ್ಡಿನ ಅರಿವು, ಹಸಿದವನಿಗೆ ಗೊತ್ತು ಅನ್ನದ ಅರಿವು, ಕಷ್ಟ ಅನುಭವಿಸಿದವನಿಗೆ ಗೊತ್ತು ಜೀವನದ ಅರಿವು".

ಹೀಗೆ ಮುಂದೆ ಸಂಸಾರದ ಜಂಜಾಟದಲ್ಲಿ ಬದುಕು ಕಟ್ಟಿಕೊಳ್ಳುತ್ತಾನೆ. ದಾರಿ ತಪ್ಪಿದ ಜೀವನಕ್ಕೆ ಸರಿಯಾದ ಮಾರ್ಗ ತಿಳಿಯದೆ ದಾರಿಯ ಅಳಿ ತಪ್ಪಿದ್ದ ವ್ಯಕ್ತಿ ಜೀವನದ ಉತ್ತಮ ದಾರಿ ಹಿಡಿದು ನಡೆಯುತ್ತಾನೆ. ತಾಳ್ಮೆಯಿಂದ ಯೋಚಿಸಿ ಸರಿ ತಪ್ಪುಗಳನ್ನು ತಿಳಿದು ಮುಂದಿನ ಕನಸುಗಳ ಮೂಟೆ ಕಟ್ಟಿಕೊಂಡು ಅವುಗಳನ್ನು ಗೆಲ್ಲಬೇಕೆಂದು ಉತ್ತಮದಾರಿಯಲ್ಲಿ ಸಾಗುತ್ತಾನೆ. ಒಟ್ಟಿನಲ್ಲಿ ಮನುಷ್ಯನ ಬದುಕಿನುದ್ದಕ್ಕೂ ಸಿಗುವ ಮೈಲುಗಲ್ಲುಗಳನ್ನು ಯಶಸ್ವಿಯಾಗಿ ಸೇರುವ ಮಾರ್ಗಗಳನ್ನು ಕವಿ ತಮ್ಮ ಕವಿತೆಗಳಲ್ಲಿ ವಿಶ್ಲೇಷಿಸಿದ್ದಾರೆ.

# ಸದ್ದಿಲ್ಲದೆ ಮನ ಸೆಳೆದ 'ಸೈರಾ'

**ಚಿತ್ರ ವಿಮರ್ಶೆ**
**ಷಣ್ಮುಖಾರಾಧ್ಯ ಬಿ. ಜಿ.**

| | |
|---|---|
| ಚಿತ್ರ | : ಸೈರಾ ನರಸಿಂಹರೆಡ್ಡಿ |
| ಭಾಷೆ | : ಕನ್ನಡ, ತೆಲುಗು, ತಮಿಳು, ಮಳಯಾಲಂ, ಹಿಂದಿ |
| ನಿರ್ದೇಶಕರು | : ಸುರೇಂದ್ರ ರೆಡ್ಡಿ |
| ತಾರಾಗಣ | : ಚಿರಂಜೀವಿ, ಅನುಷ್ಕ, ಅಮಿತಾಭ್ ಬಚ್ಚನ್, ಸುದೀಪ್, ನಯನತಾರ, ತಮನ್ನ, ಜಗಪತಿ ಬಾಬು |
| ನಿರ್ಮಾಪಕರು | : ರಾಮ್‌ಚರಣ್ |
| ರೇಟಿಂಗ್ | : ******** 8/10 |

ಇದು ಐತಿಹಾಸಿಕ ಘಟನೆಯೊಂದನ್ನು ಒಳಗೊಂಡಿದ್ದು, ನೈಜ ಘಟನೆ ಆಧಾರಿತ ಚಿತ್ರವಾಗಿದೆ. ಬ್ರಿಟಿಷ್ ಮತ್ತು ರೈತ ವರ್ಗಗಳಲ್ಲಿ ನಡೆಯುವ ಸಂಘರ್ಷವನ್ನಿಟ್ಟು ಕಥೆಯನ್ನು ಹೆಣೆದಿದ್ದಾರೆ. ವಾಸ್ತವದಲ್ಲಿರುವ ಕುತಂತ್ರಗಳು ಹೊಸದೇನಲ್ಲ, ಈ ಹಿಂದೆಯೂ ಇದ್ದವು ಎಂಬುದು ಈ ಚಿತ್ರ ಪದೇಪದೇ ನೆನಪಿಸುತ್ತದೆ.




ಚಿತ್ರದಲ್ಲಿ ಉಯ್ಯಾಲವಾಡ ನರಸಿಂಹ ರೆಡ್ಡಿ (ಚಿರಂಜೀವಿ), ಝಾನ್ಸಿ ಲಕ್ಷ್ಮೀ ಬಾಯಿ (ಅನುಷ್ಕ), ಗೋಸಾಯಿ ವೆಂಕನ್ನ (ಅಮಿತಾಭ್ ಬಚ್ಚನ್), ಅವುಕು ರಾಜ (ಸುದೀಪ್), ಲಕ್ಷ್ಮೀ (ತಮನ್ನ), ಸಿದ್ಧಮ್ಮ (ನಯನತಾರ), ವೀರ ರೆಡ್ಡಿ (ಜಗಪತಿ ಬಾಬು) ಇಂತಹ ಪಾತ್ರಗಳನ್ನು ಜೋಡಿಸುವ ಮೂಲಕ ನಾಯಕನ ಪಾತ್ರದ ಘನತೆಯನ್ನು ಹೆಚ್ಚಿಸಿದ್ದಾರೆ.

ಸೈರಾ ನರಸಿಂಹರೆಡ್ಡಿಗೆ ಸುರೇಂದ್ರ ರೆಡ್ಡಿ ಆ್ಯಕ್ಷನ್ ಕಟ್ ಹೇಳಿದ್ದಾರೆ. ಸ್ವಾತಂತ್ರ್ಯ ಪೂರ್ವದಲ್ಲಿ ಅಧಿಕ ಸುಂಕವನ್ನು ವಿರೋಧಿಸಿ, ಬ್ರಿಟಿಷರಿಗೆ ಸಿಂಹ ಸ್ವಪ್ನವಾಗಿದ್ದ ರಾಯಲ ಸೀಮೆಯ ನಾಯಕ ಸೈರಾ ನರಸಿಂಹ ರೆಡ್ಡಿಯ ಕಥೆಯೇ ಈ ಸಿನಿಮವಾಗಿದ್ದು, ಆ ಪಾತ್ರವನ್ನು ಚಿರಂಜೀವಿ ಅವರು ಸೂಕ್ತವಾಗಿ ನಿಭಾಯಿಸಿದ್ದಾರೆ.

ಅಮಿತ್ ತ್ರಿವೇದಿ ಅವರ ಸಂಗೀತ ನಿರ್ದೇಶನ, ರತ್ನವೇಲು ಅವರ ಸಿನಿಮಾಟೋಗ್ರಫಿ ಹಾಗೂ ಅಲ್ಲಲ್ಲಿ ಕಾಣುವ ಗ್ರಾಫಿಕ್ಸ್ ಚಿತ್ರಕ್ಕೆ ಇನ್ನಷ್ಟು ಬಲ ತುಂಬಿದೆ. ಬ್ರಿಟಿಷರ ಕಾಲದಲ್ಲಿದ್ದ ಭಾರತೀಯರ ಮುಗ್ಧತೆಯನ್ನು ಅಚ್ಚುಕಟ್ಟಾಗಿ ಬಿಂಬಿಸಿದ್ದಾರೆ. ಚಿತ್ರಕಥೆಯಲ್ಲಿ ಬ್ರಿಟಿಷರು ರೈತರಿಂದ ಕಿತ್ತುಕೊಂಡ ಧಾನ್ಯವನ್ನು ಒಬ್ಬ ರೈತನ ಮಗ ಹಿಂಪಡೆದು ಕಥೆಗೆ ತಿರುವು ನೀಡುತ್ತಾನೆ. ಅಲ್ಲಿಂದ ಕ್ರಾಂತಿ ಶುರುವಾಗುತ್ತದೆ.

ಚಿತ್ರದಲ್ಲಿ ಯುದ್ಧಗಳೇ ಹೆಚ್ಚಾಗಿದ್ದು, ಅಲ್ಲಲ್ಲಿ ಪ್ರೇಮದ ಸನ್ನಿವೇಶಗಳು ಮನಸ್ಸಿಗೆ ಹಿತ ನೀಡುವಂತಿವೆ. ಅನುಷ್ಕ, ನಯನತಾರ ಮತ್ತು ತಮನ್ನ ಈ ಮೂವರು ಚಿತ್ರದಲ್ಲಿ ನಟಿಸಿದ್ದು, ಸಿದ್ಧಮ್ಮ ಪಾತ್ರವನ್ನು ನಿಭಾಯಿಸಿದ ನಯನತಾರ ಹೆಚ್ಚು ಗಮನ ಸೆಳೆಯುತ್ತಾರೆ. ಈ ಚಿತ್ರದಲ್ಲಿ ಅಮಿತಾಭ್ ಬಚ್ಚನ್ ಮತ್ತು ಸುದೀಪ್ ಕಾಣಿಸಿಕೊಂಡಿದ್ದು ಚಿತ್ರಕ್ಕೆ ಮತ್ತಷ್ಟು ರಂಗು ನೀಡಿದಂತಾಗಿದೆ.

# ಮರಳಿ ಮಣ್ಣಿಗೆ
## (ಇದು ಪ್ರಾಯಶ್ಚಿತ್ತದ ಕಥೆ)

"ಏನ್ ಬಿಸಿಲು ಅಂತಿರಾ? ಈ ಬೇಸಿಗೆಯಲ್ಲಿ ಮೈ ಬಗ್ಗಿಸಿ ಹೊಲದಲ್ಲಿ ದುಡಿಯೋದು ಒಂದೇ, ಬೆಂಕಿ ಮುಂದೆ ಬೆಣ್ಣೆ ಇಡೋದು ಒಂದೇ. ಜೀವದ ಜೊತೆಗೆ ಜೀವನವೂ ಕರಗಿ ಹೋಗುತ್ತೆ. ಮನೆಯ ಬಡತನಕ್ಕೆ 10ನೇ ಕ್ಲಾಸಿಗೆ ಶಿಕ್ಷಣ ಬಿಟ್ಟೆ. ಮುಂದೋದೋಕಾಗದೆ, ನಮ್ಮಪ್ಪಂಗೆ ಅಪ್ಪಾ ಈ ಹೊಲದಲ್ಲಿ ಎಷ್ಟೇ ದುಡಿದರೂ ಪ್ರಯೋಜನ ಇಲ್ಲ. ಇದನ್ನೆಲ್ಲ ಬಿಟ್ಟು ಪೇಟೆಗೆ ಹೋಗಿ ಯಾವುದಾದ್ರೂ ಕೆಲ್ಸ ಮಾಡಿದ್ರೆ, ಸುಲಭವಾಗಿ ಹಣ ಸಂಪಾದಿಸಬಹುದು ಅಂತ ಹೇಳಿದ್ರೆ, 'ಲೋ ಬಡ್ಡಿಮಗನೆ, ನಾನು, ನಮ್ಮಪ್ಪ, ನಮ್ಮ ತಾತ ಹೀಗೆ ಇಡೀ ನಮ್ಮ ವಂಶಕ್ಕೇನೆ ಈ ಮಣ್ಣು ಅನ್ನ ಕೊಟ್ಟಿದೆ. ಅಂಥ ಈ ಮಣ್ಣನ್ನು ಬಿಟ್ಟು ಹೋಗೋದು ಒಂದೇ, ವರ ಕೊಟ್ಟ ದೇವರಿಗೆ ದ್ರೋಹ ಬಗೆಯೋದೂ ಒಂದೇ' ಎಂದು ಮಾತಿನಿಂದಲೇ ಬಾಯಿಗೆ ಬರೆ ಎಳಿತಾನೆ. ಸಿರಾ ತಾಲೂಕಿನ ಯಾದಲಡಕು ಗ್ರಾಮವೇ ಹೀಗೆನಾ ಅನಿಸುತ್ತೆ. ಅಕ್ಕಪಕ್ಕದ ಹಳ್ಳಿಯವರೆಲ್ಲಾ ಬೆಂಗಳೂರಿಗೆ ಹೋಗಿ ದುಡಿದು ಜೀವನ ಕಟ್ಕೋಳ್ತಿದ್ರೆ, ನಮ್ಮಪ್ಪನೂ ಸೇರಿ ಹಳ್ಳಿಯವರು ಭೂಮಿ, ವ್ಯವಸಾಯ ಅಂದ್ಕೊಂಡು ಇನ್ನು ಈ ಊರಲ್ಲಿಯೇ ಬಿದ್ದವ್ರೆ. ಈ ಮೂಢರು ಏನಾದ್ರೂ ಮಾಡ್ಕೊಳ್ಳಿ, ನಾನಂತು ಈ ಊರಲ್ಲಿ ಮಾತ್ರ ಇರಲ್ಲ. ಯಾವುದಾದರೂ ಸಮಯ ನೋಡ್ಕೊಂಡು ಪೇಟೆಯಲ್ಲಿಯೇ ಜಾಂಡಾ ಹೂಡ್ತೀನಿ. ಅದಕ್ಕಾಗಿ ಎಷ್ಟಾದ್ರೂ ಕಸರತ್ತು ಮಾಡೋಕೆ ರೆಡಿ" ಎಂದು ಹೇಳುತ್ತಾ ಪೇಟೆಗೆ ಹೋಗುವುದನ್ನೇ ಯೋಚಿಸುತ್ತಾ ಕೆಲಸ ಮಾಡುತ್ತಿದ್ದೆ.

ಅಷ್ಟೊತ್ತಿಗೆ ಸ್ನೇಹಿತ ತಿಮ್ಮ ಬಂದು, 'ಲೋ ಕೆಂಪ ಏನೋ ಮಾಡ್ತಿದ್ದೀಯಾ? ಕೆಲ್ಸಾ ಮಾಡಿದ್ದು ಸಾಕು. ಮನೆ ಕಡೆಗೆ ಹೋಗ್ಬೇಕಂತೆ ನಿಮ್ಮಪ್ಪ ಹೇಳಿ ಕಳ್ಸಿದ್ರು ಎಂದ. ಅದಕ್ಕೆ ಕೆಂಪ, ಯಾಕಂತೆ? ಮನೆಯಲ್ಲಿದ್ರೆ ಹೊಲಕ್ಕೆ ಹೋಗು ಅಂತಾರೆ, ಹೊಲಕ್ಕೆ ಹೋಗಿ ಕೆಲಸ ಮಾಡ್ತಿದ್ರೆ ಮನೆಗೆ ಬಾ ಅಂತಾರೆ. ನನ್ನನ್ನ ಇವ್ರೆಲ್ಲ ಕೈಗೊಂಬೆ ಅನ್ಕೊಂಡ್ಬಿಟ್ಟವ್ರೆ. ಇವರ ತಾಳಕ್ಕೆ ಹೆಜ್ಜೆ ಹಾಕುತ್ತಾನೆ ನನ್ನ ಅರ್ಧ ಜೀವನ ಮುಗಿತು. ಎಂದು ಬೈದುಕೊಳ್ಳುತ್ತಾ, ಮನೆಯ ಕಡೆಗೆ ಹೊರಟೆ.

**(ಮನೆಯಲ್ಲಿ ಅಪ್ಪ ರಾಮಣ್ಣ ಮತ್ತು ಅಮ್ಮ ಲಕ್ಷ್ಮೀ ಇಬ್ಬರೂ ಮಾತನಾಡುತ್ತಿದ್ದರು.)**

'ಲೇ ಲಕ್ಷ್ಮೀ, ಕೆಂಪ ಈ ಹೊಲದಲ್ಲಿ ದುಡಿತಿರೋದನ್ನ ನೋಡೋಕಾಗ್ತಿಲ್ಲ ಕಣೆ. ಅವನು ಅಂದ್ಕೊಂಡಂಗೆ ಪೇಟೆಗೆ ಕಳ್ಸಿಬಿಡೋಣ' ಎಂದ. ಲಕ್ಷ್ಮೀ, 'ಹೂಂ ಕಣ್ರೀ, ಅವನ ಇಚ್ಚೆ ಕೂಡ ಅದೇನೇ. ಹೇಗಾದ್ರೂ ಮಾಡಿ ಪೇಟೆಗೆ ಕಳ್ಸೋಣ ಎಂದಳು. ಅದಕ್ಕೆ ರಾಮಣ್ಣ, 'ನಾನು ಪಟೇಲರ ಹತ್ರ ಮಾತಾಡಿದ್ದೀನಿ. ಅವರ ಸ್ನೇಹಿತ ರಾಜಕೀಯ ವ್ಯಕ್ತಿಯಂತೆ. ಹತ್ತನೇ ತರಗತಿ ಓದಿದರೂ ಪರವಾಗಿಲ್ಲ ಅವನಿಗೆ ನಾನು ಕೆಲಸ ಕೊಡಸ್ತೀನಿ ಎಂದು ಹೇಳ್ತಿದ್ದಾರೆ. ಆದರೆ ಅದಕ್ಕೆ ಹಣ ಖರ್ಚಾಗುತ್ತಂತೆ ಕಣೆ. 2 ಲಕ್ಷ ಕೊಟ್ರೆ 20,000 ಸಂಬಳ ಬರುವಂತ ಅದ್ಯಾವುದೋ ಕೆಲ್ಸ ಕೊಡಸ್ತಾರಂತೆ. ಅದಕ್ಕೆ ಪಟೇಲರು 2 ಎಕರೆ ಭೂಮಿಯನ್ನು ಅವರಿಗೆ ಅಡ ಇಟ್ಟರೆ, 2 ಲಕ್ಷ ಕೊಡ್ತಾರಂತೆ. ಮಗ ಕೆಲಸಕ್ಕೆ ಸೇರಿಕೊಂಡ ಮೇಲೆ, ಎರಡು ವರ್ಷದಲ್ಲಿಯೇ ಎಲ್ಲಾ ಹಣವನ್ನು ಕೊಟ್ಟು ನಮ್ಮ ಹೊಲವನ್ನು ಹಿಂಪಡೆದುಕೊಳ್ಳಬಹುದು' ಎಂದ. ಅದಕ್ಕೆ ತನ್ನ ಲಕ್ಷ್ಮೀಯೂ ಒಪ್ಪಿದಳು.

ಅಷ್ಟೊತ್ತಿಗೆ ನಾನು, ಮನೆ ಬಾಗಿಲಿನಿಂದ ಬಿರುಸಾಗಿ ಬಂದು, 'ಏನಪ್ಪಾ, ಯಾಕೆ ಕರೆದಿದ್ದು? ಹೊಲದಲ್ಲಿ ನೋಡುದ್ರೆ ಅಷ್ಟೊಂದು ಕೆಲ್ಸ ಬಿದ್ದವೆ. ನೀವು ನೋಡುದ್ರೆ ಕಾಲ ಕಲಿತಾ ಕೂತಿದ್ದೀರಾ. ಅದೇನು ಬೇಗ ಹೇಳಿ' ಎಂದು ಜೋರು ಧ್ವನಿಯಲ್ಲಿ ಹೇಳಿದರು. ಅದಕ್ಕೆ ಅಮ್ಮ, ನೋಡು ಕೆಂಪ, ಈ ಹೊಲದ ಕೆಲ್ಸಾನಾ ನಾವು ನೋಡ್ಕೋಳ್ತೀವಿ. ನೀನು ತುಂಬಾ ದಿನದಿಂದ ಪೇಟೆಗೆ ಹೋಗ್ಬೇಕು ಅಂತ ಅನ್ಕೊಂಡಿದ್ದೆ ಅಲ್ವಾ? ಅದಕ್ಕೆ ನಿಮ್ಮಪ್ಪ ಒಂದು ಕೆಲಸ ನೋಡಿದ್ದಾರೆ. ತಿಂಗಳಿಗೆ 20,000 ಸಂಬಳವಂತೆ ಹೋಗ್ತಿಯಾ? ಎಂದಳು. ಆ ಮಾತುಗಳನ್ನು ಕೇಳಿ ನನಗೆ ಎಲ್ಲಿಲ್ಲದ ಖುಷಿ ಉಕ್ಕಿ ಹರಿಯಿತು. ಬಹುದಿನಗಳಿಂದ ಇದ್ದ ಬಯಕೆ ನೆರವೇರುವ ಕಾಲ ಬಂದಿತು ಎಂಬ ಹರುಷದಲ್ಲಿ ತೇಲಾಡಿದೆ. ಮರುದಿನವೇ ನನ್ನನ್ನು ಬೆಂಗಳೂರಿಗೆ ಕಳಿಸಲು ತೀರ್ಮಾನಿಸಿದರು.



ಮರುದಿನ ಅಪ್ಪ, 2 ಲಕ್ಷ ರೂಪಾಯಿ ನೀಡಿ, ಇದು ಪಟೇಲರ ಸ್ನೇಹಿತ ರುದ್ರಪ್ಪನಿಗೆ ಕೊಟ್ಟುಬಿಡು ಎಂದ. ನನ್ನ ಖರ್ಚಿಗೆ ಮನೆಯಲ್ಲಿ ಹಣ ಇಲ್ಲದ ಕಾರಣ, ಅಮ್ಮ ತನ್ನ ಬೆಂಡೋಲೆ ಮಾರಿ, 3,000 ತಂದು ನೀಡಿದ್ದಳು. ರುದ್ರಪ್ಪನ ವಿಳಾಸದೊಂದಿಗೆ ನಾನು ಬೆಂಗಳೂರಿನ ಬಸ್ ಹಿಡಿದೆ. ದಾರಿಯುದ್ದಕ್ಕೂ ನೂರಾರು ಆಲೋಚನೆ. ಅಲ್ಲಿನ ವಾತಾವರಣ ಹೇಗಿದೆಯೋ, ಕೆಲಸ ಏನಿದೆಯೋ, ಆ ಕೆಲಸವನ್ನು ನಾನು ಮಾಡಬಲ್ಲನೇ? ಎಂಬ ಪ್ರಶ್ನೆಗಳು ಸಾಲುಗಟ್ಟಿ ನಿಂತಿದ್ದವು. ಹುಟ್ಟಿನಿಂದ ಹಳ್ಳಿಯನ್ನೇ ನೋಡಿಕೊಂಡು ಬೆಳೆದ ನನಗೆ, ಬೆಂಗಳೂರು ವಿಭಿನ್ನವೆನಿಸಿತು. ಮೆಜೆಸ್ಟಿಕ್‌ನಲ್ಲಿ ಇಳಿದು ಎಲೆಕ್ಟ್ರಾನಿಕ್ ಸಿಟಿ ಕಡೆಗೆ ಹೊರಡಲು ಸಿಟಿ ಬಸ್ ನಿಲ್ದಾಣಕ್ಕೆ ಬಂದೆ.

ನಾನು ಗಾಬರಿಯಿಂದ ಅತ್ತಿಂದಿತ್ತ ಓಡಾಡುತ್ತಿದ್ದೆ. ಅಲ್ಲಿಗೆ ಒಬ್ಬಾತ ಬಂದು, ಯಾಕಪ್ಪಾ ಹೀಗಾಡ್ತಿದ್ದೀಯಾ? ಎಲ್ಲಿಗೆ ಹೋಗ್ಬೇಕು ಎಂದು ಕೇಳಿದ್ದಕ್ಕೆ, ಮೊದಲು ಶೌಚಾಲಯಕ್ಕೆ ದಾರಿ ತೋರಿಸಪ್ಪ ಪುಣ್ಯಾತ್ಮ ಎಂದು ಶೌಚಾಲಯದ ಕಡೆಗೆ ಹೊರಟೆ. ನಿತ್ಯಕರ್ಮವನ್ನು ಮುಗಿಸಿಕೊಂಡು ಊಫ್! ಏನೇ ತಡಿಬಹುದು ಆದರೆ, ಇದನ್ನ ಮಾತ್ರ ತಡೆಯೋಕಾಗಲ್ಲ ಎಂದು ಗುಣುಗುತ್ತಾ, ಮತ್ತೆ ಅವನ ಬಳಿಬಂದೆ. ಸಾರಿ ಕಣ್ರೀ, ಅರ್ಜೆಂಟ್‌ನಲ್ಲಿ ಸರಿಯಾಗಿ ಮಾತಾಡ್ಲೋಕೆ ಆಗ್ಲಿಲ್ಲ. ಶೌಚಾಲಯಕ್ಕೆ ದಾರಿ ತೋರಿಸಿದ್ದಕ್ಕೆ ಥ್ಯಾಂಕ್ಸ್. ಹಾಗೆನೇ ಈ ಅಡ್ರೆಸ್ ತೋರಿಸಿ ಬಿಟ್ರೆ ನನಗೆ ತುಂಬಾ ಅನುಕೂಲವಾಗುತ್ತೆ ಎಂದಿದ್ದಕ್ಕೆ, ಆ ಅಡ್ರೆಸ್ ಹೇಳಿ, ಆ ಕಡೆ ಹೋಗುವ ಬಸ್‌ನ್ನು ತೋರಿಸಿದ. ಅವನಿಗೆ ಧನ್ಯವಾದ ಹೇಳಿ ಬಸ್ ಹತ್ತಿದೆ.

ನಾನು ಅಂದುಕೊಂಡಂತೆ ರಾಜಕಾರಣಿ ರುದ್ರಪ್ಪ ಮನೆ ತಲುಪಿದ. ರುದ್ರಪ್ಪ ನನ್ನನ್ನು ವಿಚಾರಿಸಿ, ಅವನ ಬಂಟ ಬಸವನನ್ನು ಕರೆದು 'ಇವನಿಗೆ ಫ್ಯಾಕ್ಟರಿಗೆ ಕರೆದುಕೊಂಡು ಹೋಗಿ, ಕೆಲಸ ತೋರಿಸು. ನಮ್ಮ ಹುಡುಗರ ಜೊತೆಗೆ ಇರೋದಕ್ಕೆ ಹೇಳು' ಅಂದ. ಬಸವ ಆಯ್ತು ಬುದಿ ಎಂದು ತಲೆಯಾಡಿಸಿ, ನನ್ನನ್ನು ಕರೆದುಕೊಂಡು ಹೊರಟ. ಫ್ಯಾಕ್ಟರಿಯಲ್ಲಿ ಬರುತ್ತಿದ್ದಂತೆ ಮತ್ತೇರುವ ಕಂಪು. ಏನಿದು ಹೀಗೆ ವಾಸನೆ ಬರುತ್ತಿದೆಯಲ್ಲ ಎಂದು ಯೋಚಿಸುತ್ತಾ, ಒಳ ನಡೆದೆ. ಫ್ಯಾಕ್ಟರಿಯಲ್ಲಿ ದೊಡ್ಡ ದೊಡ್ಡ ಬಾಕ್ಸ್‌ಗಳು ಬಿದ್ದಿದ್ದವು. ಅದರಲ್ಲಿ ಏನಿದೆ ಎಂಬ ಕತೂಹಲ. ಹಾಗೆ ಒಳಗೆ ಹೋಗುತ್ತಿದ್ದಂತೆ, ಫ್ಯಾಕ್ಟರಿಯಲ್ಲಿ ನೂರಾರು ಯುವಕರು ತಯಾರಾದ ಬೊಂಬೆಗಳಲ್ಲಿ ಅದೇನನ್ನೋ ತುಂಬುತ್ತಿದ್ದರು. ಅದು ಏನೆಂದು ಅರ್ಥವಾಗದೇ, ಸುಮ್ಮನೇ ನೋಡುತ್ತಾ ನಿಂತೆ. ಬಸವನಿಗೆ ಕೇಳಿದ್ದಕ್ಕೆ, 'ಅದು ಡ್ರಗ್ಸ್ ಅದನ್ನು ಆ ಬೊಂಬೆಯಲ್ಲಿ ತುಂಬಿ ಸರಿಯಾಗಿ ಪ್ಯಾಕ್ ಮಾಡಬೇಕು. ಇದೇ ಇಲ್ಲಿ ಎಲ್ಲರ ಕೆಲಸ. ನಿಂದುನೂ' ಎಂದ. ಹತ್ತನೇ ತರಗತಿ ಓದಿದ್ದರಿಂದ ಅದರ ಬಗ್ಗೆ ಅರಿವಿತ್ತೇ ಹೊರೆತು ಅದನ್ನು ಯಾವತ್ತೂ ನೋಡಿರಲಿಲ್ಲ. ಆದರೂ ಮನೆಯಲ್ಲಿ ಕಷ್ಟಪಟ್ಟು ಕಳಿಸಿದ್ದಾರೆ. ಅದಕ್ಕಾದ್ರೂ ಇಲ್ಲಿ ದುಡಿಲೇಬೇಕು ಎಂದುಕೊಂಡು ಇಲ್ಲೇ ಕೆಲಸಕ್ಕೆ ಸೇರಿಕೊಳ್ಳಲು ಒಪ್ಪಿದೆ.


ದಿನಾಲೂ ಡ್ರಗ್ಸ್ ತುಂಬುವ ಕೆಲಸದಲ್ಲಿ ತಲ್ಲೀನನಾದೆ. ಎರಡು ತಿಂಗಳು ದುಡಿದು, ಪ್ರತಿ ತಿಂಗಳ ಹಣವನ್ನು ತಂದೆಗೆ ತಲುಪಿಸುವಂತೆ ರುದ್ರಪ್ಪನಿಗೆ ಹೇಳಿದೆ. ಅಂದಿನಿಂದ ಪ್ರತಿ ತಿಂಗಳ ಹಣವನ್ನು ರುದ್ರಪ್ಪ ಅಪ್ಪನಿಗೆ ತಲುಪಿಸುತ್ತಿದ್ದ. ಮನೆಯಲ್ಲಿ ಅಪ್ಪ-ಅಮ್ಮ ಇಬದಬರೂ, ಮಗ ದುಡಿದು ಮನೆಗೆ ಹಣ ಕಳಿಸುವಂತನಾದನಲ್ಲ. ತಂದೆ, ತಾಯಿಗೆ ಇದಕ್ಕಿಂತ ಇನ್ನೇನು ಬೇಕು? ಎಂದು ಹೆಮ್ಮೆಪಡುತ್ತಿದ್ದರು.

ನಾನು ಡ್ರಗ್ಸ್ ಅನ್ನು ಕೇಳಿದ್ದ-ನೋಡಿದ್ದ, ಆದರೆ ಎಂದೂ ಸೇವಿಸಿರಲಿಲ್ಲ. ಅಲ್ಲಿಗೆ ಕೆಲಸಗಾರರು ಸಮಯ ಸಿಕ್ಕಾಗೆಲ್ಲ ಯಾರಿಗೂ ತಿಳಿಯದೇ ಸೇವಿಸುತ್ತಿದ್ದರು. ಕೆಲವೊಬ್ಬರು ರಾತ್ರಿ ಸೇವಿಸಿ ಮಲಗುತ್ತಿದ್ದರು. ಇನ್ನೂ ಕೆಲವರು ಆ ಮತ್ತಿನಲ್ಲೇ ಕೆಲಸ ಮಾಡುತ್ತಿದ್ದರು. ಅಲ್ಲಿನ ನಿರ್ವಾಹಕರು ಅಂತವರನ್ನು ಮನಸೋ ಇಚ್ಛೆ ಥಳಿಸುತ್ತಿದ್ದರು. ನಾನು ಸೇವಿಸುತ್ತಿರಲಿಲ್ಲ. ಅದಕ್ಕೆ ಸಹದ್ಯೋಗಿಗಳೆಲ್ಲ ನನ್ನನ್ನು ಆಡಿಕೊಳ್ಳುತ್ತಿದ್ದರು. ಅದಕ್ಕೆ ನಾನು ಇದು ಸಾಹಸದ ವಿಷಯವೇ ಎಂದು ಅವರೊಡನೆ ಪಂದ್ಯ ಕಟ್ಟಿ ಒಂದು ಬಾರಿ ಸೇವಿಸಿದೆ. ಮರುದಿನದಿಂದ ಸ್ನೇಹಿತರೊಂದಿಗೆ ದಿನಾಲೂ ಸೇವಿಸುತ್ತಾ ನಾನು ನನ್ನ ನಿಯಂತ್ರಣವನ್ನೇ ಕಳೆದುಕೊಂಡೆ. ಸ್ನೇಹಿತರಿಗಿಂತ ಹೆಚ್ಚಾಗಿಯೇ ಸೇವಿಸಲಾರಂಭಿಸಿದೆ. ನಿರ್ವಾಹಕರು ಎಲ್ಲರನ್ನೂ ಥಳಿಸುವಂತೆ ನನ್ನನ್ನೂ ಥಳಿಸಿದರು. ಆದರೂ ಡ್ರಗ್ಸ್ ಸೇವಿಸುವುದನ್ನು ಮಾತ್ರ ಬಿಡಲಾಗಲಿಲ್ಲ. ಅದರ ಪರಿಣಾಮವಾಗಿ ದಿನೇ ದಿನೇ ಆರೋಗ್ಯ ಕುಸಿಯುತ್ತಾ ಬಂತು. ಬಲಾಢ್ಯನಾಗಿದ್ದ ನಾನು, ನರಪೇತಲನಾದೆ. ಈ ವಿಷಯ ಅಪ್ಪ-ಅಮ್ಮನಿಗೆ ತಿಳಿದಿರಲಿಲ್ಲ. ತಿಂಗಳು ಕಳೆಯುತ್ತಿದ್ದಂತೆ ಹಣ ಬರುತ್ತಿದ್ದರಿಂದ ಒಳ್ಳೆ ಕೆಲಸದಲ್ಲಿದ್ದಾನೆ, ಚೆನ್ನಾಗಿದ್ದಾನೆ ಎಂದು ಭಾವಿಸಿ ಸುಮ್ಮನಾಗುತ್ತಿದ್ದರು. ಸದಾ ಡ್ರಗ್ಸ್ ಮತ್ತಿನಲ್ಲೇ ಇರುತ್ತಿದ್ದ ನನಗೆ ಒಂದು ವರ್ಷ ಕಳೆದರೂ ಮನೆಗೆ ಹೋಗಬೇಕೆಂದು ನಿಸಲೇ ಇಲ್ಲ. ನಾನಾಯಿತು ನನ್ನ ಕೆಲಸ ಆಯಿತು ಎಂದುಕೊಂಡು ಮತ್ತಿನಲ್ಲೇ ಕೆಲಸ ಮಾಡುತ್ತಿದ್ದೆ. ನಿರ್ವಾಹಕರು ಮತ್ತಿನಲ್ಲಿದ್ದರೇನಂತೆ ಕೆಲಸ ಅಚ್ಚುಕಟ್ಟಾಗಿ ಮಾಡ್ತಿದ್ದಾನಲ್ಲ ಸಾಕು ಎಂದು ಸುಮ್ಮನಾಗುತ್ತಿದ್ದರು. ನಾನು ಮೈಮರೆತು ಕೆಲಸ ಮಾಡುತ್ತಿದ್ದರಿಂದ ನನ್ನ ನೋವು ನನಗೆ ತಿಳಿಯುತ್ತಿರಲಿಲ್ಲ. ದಿನೇ ದಿನೇ ಆರೋಗ್ಯ ಸಂಪೂರ್ಣವಾಗಿ ಕ್ಷೀಣಿಸುತ್ತಿತ್ತು.

ಒಂದು ದಿನ ಅಮ್ಮನಿಗೆ ನನ್ನ ನೋಡಲು ಆಸೆಯಾಗಿ ತಂದೆಯೊಂದಿಗೆ ಬಂದರು. ನಾನು ಎಂದಿನಂತೆ ಮತ್ತಿನಲ್ಲಿಯೇ ತೂರಾಡಿಕೊಂಡು ಕೆಲಸ ಮಾಡುತ್ತಿದ್ದೆ. ಒಂದು ವರ್ಷದಲ್ಲಿಯೇ ಸಾಕಷ್ಟು ಅಪ್ಪ-ಅಮ್ಮನಿಗೆ ಗುರುತೇ ಸಿಗದಂತಾಗಿದ್ದೆ. ಅದನ್ನು ಕಂಡು ಅವರಿಬ್ಬರೂ ಅತ್ತು ಗೋಗರೆದರು. ನೀನು ನಮಗೆ ದುಡಿದು ಹಾಕದಿದ್ದರೂ ಪರವಾಗಿಲ್ಲ. ಇಲ್ಲಿ ಮಾತ್ರ ಇರೋದೇ ಬೇಡ ಎಂದು ನನ್ನನ್ನು ಊರಿಗೆ ಕರೆದುಕೊಂಡು ಹೋದರು.

ಒಂದು ವರುಷ ಅತಿಯಾಗಿ ಡ್ರಗ್ಸ್ ಸೇವಿಸಿದ್ದರಿಂದ ಮಾನಸಿಕ ಹಾಗೂ ದೈಹಿಕವಾಗಿ ಬಲಹೀನನಾಗಿದ್ದೆ. ಆದ್ದರಿಂದ ನಾನು ಮನೋರೋಗಿಯಂತೆ ವರ್ತಿಸುತ್ತಿದ್ದೆ. ಅದನ್ನು ನಿಯಂತ್ರಿಸಲು ಅಪ್ಪ-ಅಮ್ಮ ಇಬ್ಬರೂ ಸದಾ ಪ್ರಯತ್ನಿಸುತ್ತಿದ್ದರು. ಹೊಲಗದ್ದೆಯನ್ನು ಮಾರಿ, ಚಿಕಿತ್ಸೆ ಮಾಡಿಸುತ್ತಿದ್ದರು. ನನ್ನನ್ನು ಸರಿಪಡಿಸುವುದೇ ಅವರ ಸವಾಲಾಗಿತ್ತು. ನನ್ನ ಯೋಚನೆಯಲ್ಲಿಯೇ ಇಬ್ಬರೂ ಶ್ರಮಿಸುತ್ತಿದ್ದರು. ನಮ್ಮ ಊರಿನಲ್ಲಿದ್ದ ಷಣ್ಮುಖಾರಾಧ್ಯ ಎಂಬ ನಾಟಿ ವೈದ್ಯರಿಂದ ಸರಿಪಡಿಸಲು ಪ್ರಯತ್ನಿಸಿದರು. ಸತತ ಮೂರು ತಿಂಗಳು ನಾಟಿ ಔಷಧಿಯನ್ನು ಸೇವಿಸಿ, ನಂತರ ಸ್ವಲ್ಪ ಜ್ಞಾನೋದಯವಾದಂತೆ ಅನಿಸಿತು. ಆದರೆ ನಾನು, ಮೊದಲಿನಂತೆ ಅಷ್ಟೊಂದು ಅರಿವು ಇದ್ದವನಂತೆ ಇರದಿದ್ದರೂ, ಒಂದು ಮಟ್ಟಿಗಂತು ಬಂದಿದ್ದೆ. ಈ ಹಿಂದೆ ನಡೆದ ಘಟನೆಗಳನ್ನು ನೆನಪಿಸಿಕೊಂಡೆ. 'ನಾನೇನಾ! ಈ ರೀತಿಯಲ್ಲಿ ಬದಲಾಗಿದ್ದು, ನಾನು ಕಂಡ ಕನಸು, ನನ್ನ ಬದುಕನ್ನೇ ಕತ್ತಲೆಯಾಗಿಸಿತಲ್ಲ. ತಂದೆ ತಾಯಿಯರನ್ನು ಪೋಷಿಸಬೇಕಿದ್ದ ನಾನು, ತಂದೆ ತಾಯಿಗಳಿಂದಲೇ ಉಪಚರಿಸಿಕೊಳ್ಳುವ ಅನಿವಾರ್ಯತೆ ವದಗಿತಲ್ಲ' ಎಂದು ಕೊರಗಿದೆ. ಇನ್ನು ಮುಂದಾದರೂ ತಂದೆ ತಾಯಿನ್ನು ಚೆನ್ನಾಗಿ ನೋಡಿಕೊಳ್ಳುವ ಮೂಲಕ ನನ್ನ ಈ ತಪ್ಪಿಗೆ ಪ್ರಾಯಶ್ಚಿತ್ತ ಅನುಭವಿಸಬೇಕು ಎಂದು ದೃಢನಾದೆ. ಚೇತರಿಸಿಕೊಂಡ ನಾನು ನಮ್ಮ ಹೊಲದಲ್ಲಿಯೇ ಕಷ್ಟಪಟ್ಟು ಕೆಲಸ ಮಾಡಿ, ಹಣ ಸಂಪಾದಿಸಿ, ಪಟೇಲನಿಗೆ ಹಣವನ್ನು ಹಿಂತಿರುಗಿಸಿದೆ. ಪಟೇಲನಿಂದ ಬಂದ 2 ಎಕರೆ ಹೊಲವನ್ನೂ ವ್ಯವಸಾಯಕ್ಕೆ ಬಳಸಿದೆ. ನನ್ನ ಪ್ರಾಯಶ್ಚಿತ್ತದಿಂದ ದುಡಿದ ಫಲವಾಗಿ, ಬಡತನ ಮರೆಯಾಯಿತು. ನನಗೆ ಬೆಂಗಳೂರಿಗೆ ಕಳಿಸುವಾಗ ಅಮ್ಮ ಮಾರಿದ್ದ ಬೆಂಡೋಲೆಯನ್ನು ಖರೀದಿಸಿ ಅಮ್ಮನಿಗೆ ನೀಡಿದೆ. ಆಗ ಅಮ್ಮ ನನ್ನನ್ನು ತಬ್ಬಿ ಭಾವುಕಳಾದಳು.

▶ ಉಮೇಶ ರೈತನಗರ




–ಚಂದನ್ ಆರ್.

## ಸುಡೊಕು–ಹುಡುಕು

| | | | | | | | | |
|---|---|---|---|---|---|---|---|---|
| | 2 | 9 | 7 | | | | | 3 |
| 8 | 4 | | 9 | | | 6 | | |
| | 5 | 3 | 4 | | 6 | 8 | | 9 |
| | 1 | | | | 7 | 5 | | 6 |
| | | | 1 | | 3 | | | |
| 3 | | 5 | 2 | | | | 8 | |
| 1 | | 2 | 6 | | 8 | 3 | 4 | |
| | | 6 | | | 2 | | 9 | 8 |
| 5 | | | | | 9 | 1 | 6 | |

(ಉತ್ತರ ಮುಂದಿನ ವಾರ)

**ಸಂಪಾದಕೀಯ ತಂಡ:** ಬೋಸಮ್ಮ ಓ., ಚಂದನ್ ಆರ್., ಕವನ ಕೆ.ವಿ., ಕಾವ್ಯ ಎನ್., ನಿಸರ್ಗ ಸಿ.ಎ., ಸವಿತ ಜಿ., ಷಣ್ಮುಖಾರಾಧ್ಯ ಬಿ.ಜಿ., ಉಮೇಶ । ಇದು ಖಾಸಗಿ ಪ್ರಸಾರದ ಪ್ರಾಯೋಗಿಕ ಪತ್ರಿಕೆ । ಸಲಹೆಗಳಿಗೆ ಸ್ವಾಗತ
**ಅಧ್ಯಾಪಕ ಮಾರ್ಗದರ್ಶಕರು:** ಸಿಬಂತಿ ಪದ್ಮನಾಭ ಕೆ.ವಿ. ಅನನ್ಯ ಎಂ., ಪೃಥ್ವೀರಾಜ್ ಟಿ. **ಸುದ್ದಿ ಹಾಗೂ ಅನಿಸಿಕೆಗಳನ್ನು ಈ ವಿಳಾಸಕ್ಕೆ ಕಳಿಸಿ:** journalismtut@gmail.com